NON-OFFICIAL RESOLUTION

Implematantion of the Decision of the Suprme Court *re*: Reservation in, Government Services iu Respect Of Backward Class and Scheduled Castes

(Debate continued)

Mr. SPEAKER.—The time allotted for this Resolution is over. Is the House inclined to extend the time ? Let there be a motion.

Sri A. P. APPANNA (Virajpet).—I move:

"That the time allotted for this Resolution may be extended by one hour."

Mr. SPEAKER.—Is it the wish of the House to extend the time by one hour ?

HONOURABLE MEMBERS.—Yes.

[MR. DEPUTY SPEAKER in the chair.]

† ಶ್ರೀ ಕೆ. ಮುನಿಸ್ವಾಮಯ್ಯ (ದೇವನಹಳ್ಳಿ).— ಸ್ವಾಮಿ, ನನ್ನ ಈ ಮೊದಲನೆ ಭಾಷಣವನ್ನು ಮುಂದುವರಿಸಿಕೊಂಡು ಮಾತನಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ಒಂದು ವ್ಯವಸ್ಥಿತವಾದ ರೀತಿಯಲ್ಲಿ ಈ ನಿರ್ಣಯ ಮಂಡಿಸಿದ್ದಾರೆ. ಇದರಲ್ಲಿಯ ಪ್ರತಿಯೊಂದು ಪದವನ್ನು ಗಂಭೀರವಾಗಿ ಯೋಚನೆ ಮಾಡಿ ಅರ್ಥ ಮಾಡಿಕೊಂಡು ಇದನ್ನು ಕಾರ್ಯಗತ ಮಾಡಬೇಕೆಂದು ಸರಕಾರಕ್ಕೆ ನಾನು ಕೇಳಿಕೊಳ್ಳುತ್ತೇನೆ. ಇಲ್ಲಿ ಮಂಡಿಸಿರುವ ನಿರ್ಣಯಕ್ಕೆ ಆಧಾರವಾಗಿ ಷೆಡ್ಯೂರ್ ಟ್ರೈಬ್ಸ್ ಮತ್ತು ಕ್ಯಾಸ್ಟ್ ಆಕ್ಟಾಯಿಂಟ್‌ಮೆಂಟ್ ಕಮಿಟಿ ವರದಿಯಲ್ಲಿ 41ನೆ ಪುಟದಿಂದ ಹಿಡಿದು 57ನೇ ಪುಟದ ವರೆಗೆ ಇಷ್ಟೊಂದು ದೊಡ್ಡ ಜಡ್ಜಮೆಂಟ ಇದೆ. ಸುಪ್ರೀಂ ಕೋರ್ಟ್ ಜಡ್ಜಮೆಂಟ್ ಕೊಟ್ಟಿದೆ. ಷೆಡ್ಯೂರ್ ಕ್ಯಾಸ್ಟಿನವರಿಗೆ ಇತರ ಹಿಂದುಳಿದ ಜಾಗಡದವರಿಗೆ ಒದಗಿಸಬೇಕಾದಂಥ ಅನುಕೂಲತಗಳನ್ನು ಕೊಡಬೇಕೆಂದು ಈ ನಿರ್ಣಯದಲ್ಲಿ ಇರುವುದನ್ನು ಸಂಪೂರ್ಣವಾಗಿ ಏವರವಾರಿ ಜಡ್ಜಮೆಂಟಿನಲ್ಲಿ ಕೊಟ್ಟಿದ್ದಾರೆ. ಸರಕಾರದವರು ಅದನ್ನು ಎಚ್ಚರಿಕೆಯಿಂದ ಓದಿ ಜಾಗ್ರತೆ ಅನುಕೂಲಮಾಡಿಕೊಡಬೇಕೆಂದು ಪುನಃ ಪುನಃ ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಸರಕಾರಕ್ಕೆ ಒಂದು ಅನುಮಾನ ಇದ್ದ ಹಾಗೆ ಇದೆ. ಕೆಳದರ್ಜೆಯಲ್ಲಿರುವವರಿಗೆ ಪ್ರಮೋಷನ್ ಕೊಟ್ಟು ಅಧಿಕಾರಿಗಳಾಗಿ ನೇಮಿಸಲ್ಪಟ್ಟರೆ ಮೇಲೆ ಇದ್ದಂಥ ಅಧಿಕಾರಿಗಳಿಗೆ ಅಸಮಾಧಾನ ಉಂಟಾಗುತ್ತದೆ, ದಕ್ಷತೆ ಕಡಿಮೆಯಾಗುತ್ತದೆ, ಆಡಳಿತ ಸಡಿಲ ಬೀಳುತ್ತದೆ ಎಂಬ ಅನುಮಾನ ಇದ್ದ ಹಾಗೆ ಕಾಣುತ್ತದೆ. ಅಂಥ ಅನುಮಾನಕ್ಕೆ ಆಧಾರವಿಲ್ಲ. ಅದಕ್ಕೆ ಆಧಾರವಾಗಿ ಇತ್ತೀಚೆಗೆ ಸಿವಿಲ್ ಲಿಸ್ಟ್ ಪ್ರಿಂಟ್ ಆಗಿರುವುದನ್ನು ನೋಡಿದರೆ ಎಷ್ಟೋ ಯುವಕರು ಅಧಿಕಾರಿಗಳಾಗಿ 20 ವರ್ಷ ಸೇವೆ ಮಾಡಿದ ಹಿರಿಯ ಅಧಿಕಾರಿಗಳ ಮೇಲೆ ಬಂದು ಅಧಿಕಾರ ಸ್ಥಾನದಲ್ಲಿ ಕೂತಿದ್ದಾರೆ. ಹಿರಿಯರು ವಿದ್ಯಾ ಅರ್ಹತೆ ಪಡೆದಿದ್ದಾರೆ. ಟೆಕ್ನಿಕಲ್ ವಿದ್ಯಾ ಅರ್ಹತೆ ಹೊಂದಿದ್ದಾರೆ. ಹೊಸದಾಗಿ ಕೆಲಸಕ್ಕೆ ಸೇರಿದವರಿಗಿಂತಲೂ ನಮ್ಮ ಅಥವ ಹೆಚ್ಚು ಅರ್ಹತೆ ಇದೆ. ರಾಜ್ಯಪುನರ್ವಿಂಗಡಣೆಯಾದ ಕಾಲದಲ್ಲಿ ಕಾನೂನಿಕ್ಕೆ ಅನುಗುಣವಾಗಿ ಸೀನಿಯರ್ ಆಫೀಸರ್ ಮೇಲೆ ಚಿಕ್ಕ ವಯಸ್ಸಿನವರು, ಕಡಿಮೆ ಸರ್ವಿಸ್ ಮಾಡಿದಂಥವರು ಬಂದು ಕೂತುಕೊಂಡಿದ್ದಾರೆ. ಇದರ ವಿಷಯದಲ್ಲಿ ನಾನು ಆಕ್ಷೇಪಣೆ ಮಾಡುತ್ತಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರಿಗೆ ಅನ್ಯಾಯ ನಡೆದಿದೆ, ಎಂಬುದಕ್ಕೆ ಉದಾಹರಿಸುತ್ತಿದ್ದೇನೆ.

ಇದಕ್ಕೆ ನಮ್ಮ ಸಿವಿಲ್ ಲಿಸ್ಟೇ ಸಾಕ್ಷಿ ಕೊಡುತ್ತಾ ಇದೆ. ಹೀಗೆ ಅಂತರರಾಷ್ಟ್ರೀಯ ಲೆಕ್ಕದಲ್ಲಿ ಬಂದು ಚಿಕ್ಕ ವಯಸ್ಸಿನವರು ಮತ್ತು ಬಹಳ ಕಡಿಮೆ ಸರ್ವೀಸ್ ಮಾಡಿದವರು ಬಹಳ ಹೆಚ್ಚು ಸರ್ವೀಸ್ ಮಾಡಿರುವವರ ಮೇಲೆ ಇರುವುದರಿಂದ ಆಡಳಿತ ದಕ್ಷತೆ ತಪ್ಪಿಹೋಗುವುದಿಲ್ಲವೆ ? ಆದರೂ ಆಡಳಿತ ನಡೆಯುತ್ತಿದೆ. ಆದರೆ ಹರಿಜನರಿಗೆ ಪ್ರಮೋಷನ್ ಕೊಡುವುದರಿಂದ, ಹರಿಜನರನ್ನು ಪ್ರೊಬೇಷನರ್ಸ್ ಆಗಿ ತೆಗೆದುಕೊಳ್ಳುವುದರಿಂದ ಮಾತ್ರ ಆಡಳಿತ ದಕ್ಷತೆ ತಪ್ಪಿಹೋಗುತ್ತದೆ ಎಂಬುದು ನಡೆಯಲ್ಲ. ಹರಿಜನರಿಗೆ ದಕ್ಷತೆ ಇಲ್ಲ ಎಂದರೆ ಎಂತಹ ದುಷ್ಪರಿಣಾಮವಾಗುತ್ತದೆ ಎಂಬುದನ್ನು

ನರ್ಕಾರದವರು ಗಮನಿಸಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದನ್ನು ಹೆತಿಳಿಪೇ ಉಚ್ಚತಮ ಕೋರ್ಟಿನವರು ಏನು ಹೇಳಿದ್ದಾರೆ ಎಂದರೆ: ಬಹಳ ವರ್ಷಗಳ ಕಾಲದಿಂದ ಚರಿತ್ರೆಯ ಕಾಲದಿಂದ, ಜನಗಳಿಗೆ ಜ್ಞಾಪಕ ಬರದೇಇದ್ದಕಾಲದಿಂದ, ಯುಗ ಯುಗಾಂತರದಿಂದಲೂ ಹರಿಶ್ಚಂದ್ರನ ಕಾಲದಿಂದ ಅಸ್ಪೃಶ್ಯತೆ ಇದ್ದು ಅಸ್ಪೃಶ್ಯರಾಗಿ ಅವರಿಗೆ ಇರತಕ್ಕ ಅನಾನುಕೂಲಗಳನ್ನು ಸಾಮಾಜಿಕ ದೋಷಗಳಿಂದ ಅವರ ಜೀವನದ ಅನುಕೂಲಗಳು ಕೈ ಬಿಟ್ಟು ಹೋಗಿರುವುದರಿಂದ ಈಗ ಅವರಿಗೆ ಅನುಕೂಲ ಮಾಡಿಕೊಡುವುದು ನರಿ ಎಂದು 51ನೇ ಪುಟದಲ್ಲಿ ಜಡ್ಜ್‌ಮೆಂಟ್ ಬರೆದಿರುವುದನ್ನು ನರ್ಕಾರದವರು ನೋಡಬೇಕು. ಬಹಳ ಕಾಲದಿಂದ ಇಲ್ಲೂ ಸಹ ಇದೇ ರೀತಿ ಪ್ರಸ್ತಾಪ ನರ್ಕಾರದ ಗಮನಕ್ಕೆ ತಂದಾಗ ಕೇಂದ್ರ ನರ್ಕಾರಕ್ಕೆ ಬರೆದಿದ್ದೇವೆ, ಅಲ್ಲಿ ದ ಆದೇಶ ನಿರೀಕ್ಷಿಸಿದ್ದೇವೆ ಎಂದು ಹೇಳಿದ ನಿದರ್ಶನ ಇದೆ. ಅಲ್ಲಿಗೆ ಬರೆದು ಎಷ್ಟೋ ದಿವಸ ಆಗಿರಬಹುದು ಉತ್ತರ ಬಂತೋ ಇಲ್ಲವೋ ಗೊತ್ತಿಲ್ಲ. ತಡವಾಗಿದ್ದರೆ ಜ್ಞಾಪಕ ಮಾಡಿ ಜಾಗ್ರತೆ ತರಿಸಿಕೊಂಡು ಉಚ್ಚತಮ ನ್ಯಾಯಾಧೀಶರು ಕೊಟ್ಟಿರತಕ್ಕ ತೀರ್ಪನ್ನು ಪಾಲಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಜಡ್ಜ್‌ಮೆಂಟ್ ವಿಷಯ ಮಾತನಾಡತಕ್ಕ ಕಾಲದಲ್ಲಿ ಕೆಲವು ನದಸ್ಯರು ಮತ್ತು ಈ ನಭೆಯ ಕೆಲವು ಮುಖಂಡರು ಅವರಲ್ಲೇ ಎಡ ಗೈ ಅವರು, ಬಲ ಗೈ ಅವರು ಎಂಬ ವಾದ ವಿವಾದ ಬಂದಿದೆ ಎಂದು ಹೇಳಿದರು. ನಮ್ಮಲ್ಲಿ ಎಡ ಗೈ ಬಲ ಗೈ ಎಂಬುವರಿಗೆ ಯಾವ ತಾರತಮ್ಯವೂ ಇಲ್ಲ. ಅವರೂ ಅಸ್ಪೃಶ್ಯರೇ, ಇವರೂ ಅಸ್ಪೃಶ್ಯರೇ, ಅವರನ್ನು ಷೆಡ್ಯೂಲ್ಡ್ ಕ್ಲಾಸ್ ಎಂದು ಕರೆಯುತ್ತಿದ್ದಾರೆ. ಎಡ ಗೈ ಆಗಲೀ, ಬಲ ಗೈ ಆಗಲೀ ಅವರಿಗೆ ಎಷ್ಟು ಸಂಖ್ಯೆಯಲ್ಲಿ ಹುದ್ದೆಗಳು ಬರಬೇಕೋ ಅಷ್ಟನ್ನು ಆದಷ್ಟು ಜಾಗ್ರತೆ ಕೊಡುವುದಕ್ಕೆ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ: ಅಸ್ಪೃಶ್ಯತೆ ನವಾಗೆ ಬಂದಿರತಕ್ಕ ಒಂದು ದೋಷ. ಅಸ್ಪೃಶ್ಯತೆ ಯನ್ನು ಚೆನ್ನಾಗಿ ಮನಗಂಡಿರತಕ್ಕ ಆ ಜಡ್ಜುಗಳು ಅದನ್ನು ಬಹಳ ಚೆನ್ನಾಗಿ ವರ್ಣನೆ ಮಾಡಿದ್ದಾರೆ, ನಮ್ಮ ನಭೆಯಲ್ಲಿ ಮಾತನಾಡಿದಂತಹ ರತ್ನಮ್ಮ ಮಾಧವರಾಯರು ಅಸ್ಪೃಶ್ಯತೆಯ ಕಳಂಕದ ಅರ್ಥವನ್ನು ನರಿಯಾಗಿ ತಿಳಿದು ಈ ನಿರ್ಣಯದ ಮೇಲೆ ಬೆಂಬಲ ಕೊಟ್ಟು ಮಾತನಾಡಿದರು, ಶ್ರೀಮತಿ ಬಿ.ಎಸ್. ಸುಬ್ಬಮ್ಮನವರು ಮತ್ತು ಶ್ರೀಮತಿ ನಾಗರತ್ನಮ್ಮ ಹಿರೇಮಠ್ ಅವರು ಶ್ರೀಮಾನ್ ನರ್ವೇಶ್ ಅವರು ಮಂಡಿಸಿರತಕ್ಕ ನಿರ್ಣಯವನ್ನು ಮಾತ್ರ ಓದಿದ್ದಾರೆ ಮತ್ತು ನುಪ್ರೀಂ ಕೋರ್ಟಿನವರು ಕೊಟ್ಟಿರತಕ್ಕ ತೀರ್ಮಾನವನ್ನು ಓದಿದ್ದರೆ ಅವರೂ ಕೂಡ ನಂಪೂರ್ಣವಾಗಿ ಈ ನಿರ್ಣಯಕ್ಕೆ ಬೆಂಬಲಕೊಡುತ್ತಾ ಇದ್ದರು.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧೀನಗರ).—ಮಾನ್ಯ ನದಸ್ಯರು ನಾನು ಹೇಳಿದ್ದನ್ನು ಅರ್ಥ ಮಾಡಿಕೊಳ್ಳಲಿಲ್ಲ. ನಾನು ಇದಕ್ಕೆ ಪೂರ್ಣ ಬೆಂಬಲವನ್ನು ಕೊಟ್ಟು ಇದರಲ್ಲಿ ಕುಂದು ಕೊರತೆಗಳೇನಿವೆ, ಮುಖಂಡರು ಯಾವ ರೀತಿ ಇವರ ಹೆನರಿನಲ್ಲಿ ಹಣವನ್ನು ದುರುಪಯೋಗ ಮಾಡುತ್ತಾ ಇದ್ದಾರೆ ಎಂಬುದನ್ನು ಹೇಳಿದೆ. ಮಾನ್ಯ ನದಸ್ಯರು ನಾನು ಹೇಳಿದ್ದನ್ನು ತೆಗೆದ ನೋಡಿ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಆರ್. ಮುನಿನ್ವಾಮಯ್ಯ.—ಅಸ್ಪೃಶ್ಯತೆಯ ಕಳಂಕವನ್ನು ಅರ್ಥಮಾಡಿಕೊಂಡಿರುವ ಮಹಿಳೆಯರಲ್ಲಿ ಶ್ರೀಮತಿ ಯಶೋಧರಮ್ಮನವರು ಪ್ರಮುಖರು. ಅವರು ತಮ್ಮಮನೆಯಲ್ಲಿ ಅಸ್ಪೃಶ್ಯರ ಕೆಲವುಜನ ಮಕ್ಕಳನ್ನು ನಾಕಿ ಅವರಿಗೆ ವಿದ್ಯಾಭ್ಯಾನವನ್ನು ಕೊಟ್ಟು ಮುಂದಕ್ಕೆ ತಂದಿದ್ದಾರೆ. ಅಂತಹವರು ಈ ದಿವನ ನಮಾಜ ಕಲ್ಯಾಣ ಮಂತ್ರಿಗಳಾಗಿ ಹರಿಜನರ ಉದ್ಧಾರ ಅವರ ಕೈಯಲ್ಲಿ ಇದ್ದು ಅವರಿಂದ ಈ ಕೆಲನವಾಗುತ್ತದೆ ಎಂಬ ನಂಪೂರ್ಣ ನಂಬಿಕೆ ನನಗಿದೆ. ಅವರೂ ಸಹ ಹರಿಜನರ ವಿಷಯು ಬಂದಾಗ ನೌಕರಿ ವಿಷಯು ಬಂದಾಗ ದಯವಿಟ್ಟು ನುಪ್ರೀಂ ಕೋರ್ಟಿನ ನಿರ್ಣಯದ ಪ್ರಕಾರ ಅವಕಾಶ ಕಲ್ಪನಲಕ್ಕೆ ಪ್ರಯತ್ನ ಮಾಡಬೇಕೆಂದು ಯಶೋಧರಮ್ಮನವರನ್ನು ವೈಯಕ್ತಿಕವಾಗಿಯೂ ಮತ್ತು ಅವರು ಪಡೆದಿರತಕ್ಕ ಮಂತ್ರಿಯ ನ್ಥಾನದ ಮೂಲಕವಾಗಿಯೂ ಬೇಡಿಕೊಳ್ಳುತ್ತೇನೆ. ಹರಿಜನರ ವಿಷಯದಲ್ಲಿ ಮಾತ್ರ ನಾನು ಹೇಳುತ್ತಿಲ್ಲ. ಜಾತಿ ವಿಷಯು ತೆಗೆದು ಕೊಂಡರೆ ಅನೇಕ ಜಾತಿಗಳು ಇವೆ: ಅಕ್ಕಸಾಲಿಗರು, ಗಾಣಿಗರು, ಕುಂಬಾರರು, ಅಗಸರು, ಗೊಲ್ಲರು, ಈ ರೀತಿ ಅನೇಕ ಜಾತಿಗಳು ಇವೆ, ಅವರೆಲ್ಲರಿಗೂ ಪ್ರಾತಿನಿಧ್ಯವಿಲ್ಲ, ಅವರೆಲ್ಲರೂ ಹಿಂದುಳಿದವರೆ. ಅವರಿಗೂ ಸಹ 16(1) ಮತ್ತು 16 (4)ರ ಪ್ರಕಾರ ನುಪ್ರೀಂ ಕೋರ್ಟಿನ ತೀರ್ಪನ್ನು ಗಮನಿನಿ ನರ್ಕಾರದವರು ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಚ್ಚತಮ ನ್ಯಾಯಾಧಿಶರಾಗಿರತಕ್ಕ, ಕೋರ್ಟಿನ ತೀರ್ಮಾನವನ್ನು ಕೊಟ್ಟಿರತಕ್ಕ ಶ್ರೀಮಾನ್ ಪಿ. ಗಜೇಂದ್ರಗಡ್‌ಕರ್ ಅವರು ಶ್ರೀ ನರ್ಕಾರೆ ಅವರು ಮತ್ತು ದಾನ್‌ಗುಪ್ತ ಅವರು ನಹ ತಮ್ಮ ನಂಪೂರ್ಣ ಅನುಭವವನ್ನು—ಅಸ್ಪೃಶ್ಯರಿಗೆ ಇರತಕ್ಕ ತೊಂದರೆಯನ್ನು ಕೊಂಕುಗಳನ್ನು ಅರ್ಥಮಾಡಿಕೊಂಡು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅವರು ಹರಿಜನರಲ್ಲದೆ ಇದ್ದರೂ ಸಹ ನ್ಯಾಯವನ್ನು ಎತ್ತಿ ಹಿಡಿದಿದ್ದಾರೆ. ಇಂತಹ ಹರಿಜನರಲ್ಲದವರು ಎತ್ತಿ ಹಿಡಿದಿರತಕ್ಕ ನ್ಯಾಯಕ್ಕೆ ನರ್ಕಾರದವರು ಬೆಂಬಲ ಕೊಟ್ಟು ಜಾಗ್ರತೆ ಅದನ್ನು ಕಾರ್ಯಗತ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿನುತ್ತೇನೆ.

†Sri A. P. APPANNA.—Sir, while lending my support to the Resolution that is before the House, I would like to say a few words. Sir, I found that most of the Hon'ble Members were stressing much upon the need of representation in the many services so far as Scheduled Castes are concerned. But, this resolution contains not only proper representation for the Scheduled Castes but also for the backward classes. I am in complete agreement with the sentiments expressed by the Members that the representation that has been guaranteed under the Constitution to the Scheduled Castes and Scheduled Tribes must be given by Government. At the same time, proper representation or proper place in Government services must also be given to the backward classes.

Here an important question arises regarding the classification of Backward classes. We have hitherto seen the basis on which classifications had taken place. Even though the benefits should be conferred to people who really belong to backward classes, we have seen that people who are forward in society had been classified as backward classes. The present Government has rectified it and we must congratulate them. The classification of backward classes followed hitherto by the Government on the basis of caste and community must not have any place in future because it is not the case or community that decides backwardness, it is the economic backwardness alone that matters in deciding reservation. Just because a person belongs to a particular community, it does not mean that he is backward. We have seen that when the classification of backwardness was done on the basis of the Nagan Gowda Committee report, most of the majority community in the State had been classified as backward. Even though we found that the major percentage of certain communities and castes have been well-represented in Government services, even though these classes and communities have advanced more than other communities, economically, even though they are socially and educationally advanced, because of pressure, because they are in a majority in Government, they were able to bring pressure and get their communities included in the list of backwardness.

Sri SANJEEVANATH AIKALA (Suratkal).—There is no quorum, Sir,

Mr. DEPUTY SPEAKER.—Let us ascertain the position.

Sri A. P. APPANNA.—Anyhow Government has taken a decision that this classification on the basis of caste should be dispensed with and economic considerations alone should weigh.

Mr. DEPUTY SPEAKER.—There is lack of quorum. The House will adjourn for 15 minutes.

The House adjourned at Twenty Minutes past Ten of the Clock and reassembled at Thirty-five Minutes past Ten of the Clock.

[MR. DEPUTY SPEAKER in the Chair]

Sri A. P. APPANNA.—I was speaking on the classification of backward classes. There must be proper representation for backward and scheduled castes. Is it the majority community like the Lingayets, Vokkaligas and others or is it on the basis of economic consideration that it should be viewed? When the economic consideration is taken into consideration, who should certify on that economic consideration? There is every scope for particular individuals to bring in pressure and exert influence to get such certificates. There must be a procedure...

†Sri K. S. SURYANARAYANA RAO (Mysore city).—The resolution is very clear:

> "That this Assembly is of opinion that Government should take immediate steps to implement the decision of the Supreme Court, that the principle of reservation in Government services in respect of Backward Classes and Scheduled Castes should be followed....."

So, it is the Supreme Court's decision. You seem to go beyond the scope of the resolution.

Sri A. P. APPANNA.—That is what I am referring to and I am suggesting as to on what basis it should be. Here, the Government has taken a right step in coming to the conclusion that economic consideration should be taken into account. The Government have authorised the people whose income is Rs. 1200 or above to get these certificates. Here, the authority that is conferred on individual officers is arbitrary. There must be a procedure on which the officer can act. It has been found in the course of 3 or 4 months where people, who were trying to get admission in the Technical Colleges, with an income of more than Rs. 1500 were able to abtain the certificates, because they could yield influence and they could bring in pressure. So, I request the Government that the authority must be made specific while classifying the backwardness and the procedure for the issue of such certificates should be clearly indicated, so that there may not be any scope for influence from any quarters.

Regarding the scheduled castes, I had understood that the constitutional guarantee has not been followed by the State Government. But, I am given to understand that the economic or social upliftment of the scheduled castes or scheduled tribes does not merely lie in giving representation in the Government services alone. In the rural areas there are scheduled castes and scheduled tribes people who are earning only ten annas a day working in the fields. If at all we are interested in uplifting the scheduled castes and scheduled tribes, we must give more stress on the wages that are being paid to these people in the rural areas. Unless a person is made economically and socially sound, he may not aspire to come up to the position of a Government servant aud then ask for promotion. It may be, these promotions are for a few people among

(SRI A. P. APPANNA)

the scheduled castes. There are people who are even lower. We must try to bring them up and we must stress on that. Unfortunately, I have found that our friends are giving more importance to Government service alone. Unless we improve their economic condition and give them education, they cannot avail the opportunities that are provided.

Sri K. S. SURYANARAYANA RAO.—Is it open to the State Government to fix up the priorities among scheduled castes in matters of reservation? You said that there are people who earn only ten annas a day and they are not looked after. There are people who are in better economic conditions and they are getting advantage.

Sri A. P. APPANNA.—Unless the Government take measures to fix the minimum wages for the workers, who are working in the fields and provide more facilities for their education and social upliftment, they cannot avail the opportunities that are provided in the constitution, and that is being followed by the State Government. Even if percentage is reserved and if there are no sufficient people to come up to that level, that means that in that section there are few people who can compete for those posts. Therefore, instead of giving more importance to the existing social upliftment, we must give more importance to those people who are economically, socially and educationally backward.

Sri S. GOPALA SALENNA (Mudabidri).—Persons belonging to scheduled castes, who were working as I Division Clerks and were eligible for promotion, have been deprived of their promotion and sent back as II Division Clerks.

Sri A. P. APPANNA.—People who are now in a position to compete for those posts, have come to that position, not because they have taken advantage of the benefits that are given by the Government. They have some how or the other come to that position and now they are in a position to seek employment in this manner. But, there are people who cannot aspire supch things at all. From that point of view, I say that instead of giving more importance to the existing social upliftment, we must give more importance to those people who are economically, socially and educationally backward.

With these few remarks, I conclude.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ, ಈ ನಿರ್ಣಯದ ಮೇಲೆ ಈ ಸಭೆಯಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿರುವುದರಿಂದ ಇದರ ಚರ್ಚೆಯನ್ನು ಇಲ್ಲಿಗೆ ಮುಕ್ತಾಯ ಮಾಡಬೇಕೆಂದು ನಾನು ಕ್ಲೋಷರ್ ಮೋರ್ಷ ಮೂವ್ ಮಾಡುತ್ತೇನೆ.

Mr. DEPUTY SPEAKER.—The question is:

"That the question be now put."

The motion was adopted.

†ಶ್ರೀಮತಿ ಯಶೋಧರಾ ದಾಸಪ್ಪ (ನವಾಜಕಲ್ಯಾಣ ಖಾತಾ ಸಚಿವರು).—ಸ್ವಾಮಿ, ಎರಡು ದಿನಗಳಿಂದಲೂ ಕೂಡ ಹರಿಜನರ ಅಭಿವೃದ್ಧಿ ವತ್ತು ಶಿಕ್ಷಣದ ಬಗೆ ಅನೇಕರು ಬಹಳ

ಒಳ್ಳೆಯ ನಲಹೆಗಳನ್ನು ಉಲ್ಲೇಖಿಸುತ್ತಾ ಈ ಠರಾವಿನ ಮೇಲೆ ಮಾತನಾಡಿದ ಪ್ರತಿಯೊಬ್ಬರೂ ಇದಕ್ಕೆ ಬೆಂಬಲ ಕೊಟ್ಟು ನ್ಯಾಯ ದೊರಕಬೇಕೆಂದು ಹೇಳಿದ್ದಾರೆ. ಎರಡನೇದಾಗಿ ಇದರ ಜೊತೆಗೆ ಕೆಲವು ಲೋಪ ದೋಷಗಳನ್ನು, ಕಠಿಣವಾಗುತ್ತಿರುವ ಕಡೆ-ಯಾವ ರೀತಿ ಅದನ್ನು ಸರಕಾರ ಸುಧಾರಿಸಬೇಕು, ಜನ ಮುಖಂಡರು ಸುಧಾರಿಸಬಹುದು, ಹಿಂದುಳಿದ ಜನಗಳ ಯೋಗಕ್ಷೇಮಕ್ಕೆ ಯಾವ ಯಾವ ಚಿಕಿತ್ಸೆಗಳನ್ನು ಮಾಡಿ ಈ ರೋಗ ನಿವಾರಣೆ ಮಾಡಿ, ಸರಿಯಾಗಿ ಈ ಜನಗಳಿಗೆ ಕೊಡುವ ಹಣ ಯಾವ ಯಾವ ರೀತಿಯಲ್ಲಿ ವಿನಿಯೋಗವಾಗಬೇಕು ಎನ್ನುವುದನ್ನೆಲ್ಲಾ ಬಹಳ ಚೆನ್ನಾಗಿ ವಿಮರ್ಶಿಸಿದ್ದಾರೆ. ನಾನು ಪ್ರತಿಯೊಬ್ಬ ಸದಸ್ಯರು ಪ್ರಾತನಾಡಿದ ವಿಚಾರಗಳನ್ನೂ ಬರೆದುಕೊಂಡಿದ್ದೇನೆ. ಅದಕ್ಕೆ ನನ್ನಲ್ಲಿ ಕನ್‌ಸ್ಟ್ರಿಕ್ಟೀವ್ ಆದ ಸುಧಾರಣೆಗಳೂ ಇವೆ.

ಈ ಸಂದರ್ಭದಲ್ಲಿ ನಾನು ಹೆಚ್ಚು ಸಮಯ ತೆಗೆದುಕೊಳ್ಳದೆ, 10 ನಿಮಿಷ ಮಾನ್ಯರಾ ಮಿನಿಷ್ಟರಿಗೆ ಸುಪ್ರೀಂ ಕೋರ್ಟ್ ಠರಾವಿನಮೇಲೆ ಮಾತನಾಡಲು ಬಿಟ್ಟು, ಉಳಿದ 20 ನಿಮಿಷದಲ್ಲಿ, ಸಾಧಾರಣವಾಗಿ ಮಾನ್ಯ ಸದಸ್ಯರು ಹೇಳಿದಂಥ ಸರ್ವಜನಿಕ ನಲಹೆಗಳು ಮತ್ತು ಫಲಪ್ರದವಾದ ಅಭಿಪ್ರಾಯಗಳನ್ನು ಯಾವ ವಿಧದಲ್ಲಿ ಸೂಚಿಸಿದ್ದಾರೆ, ಅವುಗಳ ಬಗ್ಗೆ ಮಾತನಾಡುತ್ತೇನೆ.

ನಮಾಜ ಕಲ್ಯಾಣ ಇಲಾಖೆ (ಸ್ಪೇಷಿಯಲ್ ಪೆರ್‌ಫೀರ್ ಡಿಪಾರ್ಟ್‌ಮೆಂಟ್) ಹಿಂದುಳಿದ ಮತ್ತು ಇತರ ಅನೇಕ ಬ್ಯಾಕ್‌ವರ್ಡ್ ಕ್ಲಾಸ್‌ಗಳು ಜೈಬುಗಳು, ನಾಮ್ಯಾಡಿಕ್ ಪೀಪಲ್, ಹೆಣ್ಣು ಮಕ್ಕಳು, ನಣ್ಣ ಮಕ್ಕಳು, ಇಮ್ಮಾರಲ್ ಜನಗಳು, ನಮಾಜಕ್ಕೆ ತೊಂದರೆ ತರುವ ಜನರು, ಇಂಥ ನಾನಾ ವಗ್ಗೆರೆ ಜನಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೆ ರಚಿತವಾಗಿದೆ. ಕೆಲವರು ಏನು ತಿಳಿದುಕೊಂಡಿದ್ದಾರೆಂದರೆ ಈ ಇಲಾಖೆ ಹರಿಜನಗಳಿಗಾಗಿಯೇ ಇದೆಯೆಂದು; ಅದರಿಂದ ಮಂತ್ರಿಗಳೂ ಹರಿಜನರೇ ಆಗಿರಬೇಕೆಂದೂ ಅಭಿಪ್ರಾಯಪಡುತ್ತಾರೆ. ಈ ಇಲಾಖೆಯಲ್ಲಿ ಒಂದು ಅಂಗವಾಗಿ ಉಳಿದಿರತಕ್ಕಂಥವರು ಹರಿಜನರು. ಆದ್ದರಿಂದ ಮೊದಲು ಈ ನಮಾಜ ಕಲ್ಯಾಣ ಇಲಾಖೆ ಏನಿದೆ, ಅದು ಸರ್ವರದು ಎಂದು ತಿಳಿದುಕೊಳ್ಳುವುದು ಅಗತ್ಯ.

ಎರಡನೆಯದಾಗಿ, ಹರಿಜನರಿಗೆ ಸರಿಯಾದ ಪ್ರಾತಿನಿಧ್ಯ ಸರ್ಕಾರದ ಕೆಲಸಗಳಲ್ಲಿ ಸಿಕ್ಕಿಲ್ಲ ಅನ್ನತಕ್ಕಂಥಾದ್ದನ್ನು ಹೇಳಿದ್ದಾರೆ. ಕಾನ್‌ಸ್ಟಿಟ್ಯೂಷನ್ ಅವರಿಗೆ ಒಂದು ರಕ್ಷಣೆ ಕೊಟ್ಟಿದೆ. ಅದಕ್ಕೆ ಯೋಗ್ಯರಾದವರು, ಸರಿಯಾದ ವ್ಯಕ್ತಿಗಳು, ವಿದ್ಯಾವಂತರಾದವರು, ಆಯಾ ಇಲಾಖೆಗೆ ಏನೇನು ಶಿಕ್ಷಣ ಪಡೆಯಬೇಕೋ ಅದನ್ನು ಪಡೆದಂಥವರು ಯಾರಾದರೂ ಬಂದು ಅವರಿಗೆ ಸರಿಯಾದ ರೀತಿಯಲ್ಲಿ ಕೆಲಸ ದೊರೆತಿಲ್ಲವೆಂತ ಹೇಳಿ ಸರ್ಕಾರಕ್ಕೆ ದೂರು ಬಂದರೆ, ಅದನ್ನು ಅವಶ್ಯಕವಾಗಿ ಸರಿಪಡಿಸುವುದಕ್ಕೆ ಸರ್ಕಾರ ಸದಾ ಸಿದ್ಧವಾಗಿದೆ. ಈ ಇಲಾಖೆಗಳಿಗೆ ಕೆಲಸ ಕಾರ್ಯಗಳನ್ನು ಕೊಡತಕ್ಕಂಥ ಪಬ್ಲಿಕ್ ಸರ್ವಿಸ್ ಕಮಿಷನ್‌ನ ಚೇರ್ಮನ್ನರು ಹರಿಜನರಾಗಿದ್ದಾರೆ. ಡಿವಿಜನಲ್ ಕಮಿಷನರ ನೇತೃತ್ವದಲ್ಲಿ ಎರಡನೆ ದರ್ಜೆ ನೌಕರರು ರಿಕ್ರೂಟ್‌ಮೆಂಟ್ ಕಮಿಟಿಗಳು ಏನಿವೆ, ಅವುಗಳು ಏನು ಕೆಲಸ ಕೊಡಬೇಕಾದರೂ ಕೂಡ, ಆ ಸಂದರ್ಭದಲ್ಲಿ ನಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕಂಥ ಡೈರೆಕ್ಟರು, ಅಥವಾ ಡೆಪ್ಯುಟಿ ಡೈರೆಕ್ಟರು ಅಥವಾ ಸೆಕ್ರೆಟರಿಗಳು ಕಮಿಟಿಗೆ ಹೋಗಿ, ಹರಿಜನ ಗಿರಿಜನರಿಗೆ ಸ್ಥಾನಮಾನಗಳನ್ನು ಮೊನಲಾಗಿಡಲು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ. ನಮ್ಮ ಇಲಾಖೆಯ ಡೈರೆಕ್ಟರು ಕೂಡ ಹರಿಜನರಾಗಿದ್ದಾರೆ; ಅವರು ಐ. ಎ. ಎಸ್. ಆಫೀಸರಾಗಿದ್ದಾರೆ. ಹರಿಜನರನ್ನು ಕೆಲಸ ಕಾರ್ಯಗಳಿಗೆ ನೇಮಿಸಿಕೊಳ್ಳುವ ವಿಚಾರದಲ್ಲಿ ರಕ್ಷಣೆ ಕೊಡುವುದಕ್ಕೆ ಅವರಿದ್ದಾರೆ. ಮೂರನೆಯದಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಜನಗಳು ಹೆಚ್ಚಾಗಿ ಬರಬೇಕು, ಆದ್ದರಿಂದ ಆ ಕೆಲಸ ಚೆನ್ನಾಗಿ, ಅವರ ಹಿತದೃಷ್ಟಿಯಿಂದ ಆಗಬೇಕೆಂದು, ಲೇಬರ್ ಕಮಿಷನರೂ ಹರಿಜನರೇ ನೇಮಕವಾಗಿ, ಅಲ್ಲಿಯೂ ಕೂಡ ಇವರ ರಕ್ಷಣೆಗೆ ಅವಕಾಶವಾಗಿದೆ. ಹಾಗೆಯೇ ಕೋ-ಆಪರೇಟೀವ್ ಇಲಾಖೆ ರಿಜಿಸ್ಟ್ರಾರ್‌ರವರೂ ಹರಿಜನರೇ ಆಗಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡ್ ತೆಗೆದುಕೊಂಡರೆ, ಅದರ ಚೇರ್ಮನ್ನರೂ ಹರಿಜನರೇ ಆಗಿದ್ದಾರೆ. ಇಂಥ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಅವರು ಇರತಕ್ಕಂಥ ಸ್ಥಳಗಳಲ್ಲಿ ಹರಿಜನ ಗಿರಿಜನರ ಹಿತಾನಕ್ತಿಯನ್ನು ನೋಡಿಕೊಳ್ಳುತ್ತಾರೆಂಬ ಸಂಪೂರ್ಣ ಭರವಸೆ ಸರ್ಕಾರಕ್ಕೆ ಇದೆ. ಯಾವುದಾದರೂ ಸ್ಥಳಗಳಲ್ಲಿ ಅನ್ಯಾಯವಾಗಿದ್ದರೆ, ಅದನ್ನು ಸರ್ಕಾರದ ಗಮನಕ್ಕೆ ತಂದರೆ, ಅದನ್ನು ಕೂಡಲೆ ಖಂಡಿತವಾಗಿ ಸರಕಾರ ಸರಿಪಡಿಸುತ್ತದೆ ಅನ್ನುವುದರಲ್ಲಿ ಈ ಮಾನ್ಯ ಸಭೆಗೆ ಯಾವ ಅನುಮಾನವೂ ಬೇಡ.

ನಮಾಜ ಕಲ್ಯಾಣದ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಾ ಇಲ್ಲ, ಅದರ ಮಂತ್ರಿಗಳು ಆ ಒಂದು ಜನಾಂಗದ ಬಗ್ಗೆ ಏನು ಉತ್ಸಾಹ ತೋರಿಸಬೇಕೋ ಅಷನ್ನು ತೋರಿಸುತ್ತಿಲ್ಲ ಅಸಕ್ತಿ ವಹಿಸುತ್ತಿಲ್ಲ ಅನ್ನುವ ಹಾಗೆ ಸೂಚನೆಗಳು ಬಂದವು. ಈಗ ಒಂದೂವರೆ ವರ್ಷದಿಂದ ನಾನು ಮಂತ್ರಿಯಾದಾಗಿನಿಂದ ಹರಿಜನ ಕಲ್ಯಾಣ ನಡೆಯುತ್ತಾ ಇಲ್ಲ ಸ್ವಾಮಿ. 30 ವರ್ಷದಿಂದ ನನ್ನ ಕೈರಾದಮಟ್ಟಿಗೆ ಈ ಹರಿಜನರ ಏಳಿಗೆಗಾಗಿ ದುಡಿಯುತ್ತಿದ್ದೇನೆ. ಒಂದು ವೇಳೆ ನಾನು ಈ ಸ್ಥಾನದಲ್ಲಿ ಇಲ್ಲದೆ ಹೋದರೂ, ಆಮೇಲೂ ಹರಿಜನರ ಉನ್ನತಿಗೆ ಶ್ರಮಿಸುತ್ತೇನೆ, ನನಗೆ

(ಶ್ರೀಮತಿ ಯಶೋಧರ ದಾಸಪ್ಪ)

ಗುರುವಾಗಿರುವ ಗಾಂಧಿಜಿಯವರ ಕೆಲಸವನ್ನು ಮಾಡುತ್ತೇವೆಂದು ಸತ್ಯಸಂಕಲ್ಪ ಮಾಡಿದ್ದೇನೆ. ಅವಕ್ಕಾಗಿ ಈ ಟೀಕೆ ಬೇಡ. ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಮೇಲೆ; ಈ ಇಲಾಖೆಗೆ ಒಂದು ಅಡ್‌ವೈಸರಿ ಬೋರ್ಡ್ ಏನಿತ್ತೋ ಆ ಬೋರ್ಡು ಬರೀ ಪಾಲಸಿ ಮ್ಯಾಟರು ಗಳನ್ನು ಡಿಸ್‌ಕಸ್ ಮಾಡುತ್ತಾ ಇತ್ತು; ಇಲ್ಲ ಸೇರಿದವರು ಹರಿಜನರ ಮತ್ತು ಗಿರಿಜನರ ರಕ್ಷಣೆ ಹಿತವನ್ನು ಸಂಪೂರ್ಣವಾಗಿ ತೆಗೆದುಕೊಳ್ಳಬೇಕು ಅನ್ನತಕ್ಕಂಥ ಮಹತ್ವಾಕಾಂಕ್ಷೆಯಿಂದ, ಬೇರೆ ಬೇರೆ 4 ಕಮಿಟಿಗಳನ್ನು ಮಾಡಿ, ಆಯಾಯ ಕಮಿಟಿಯಲ್ಲಿ ಸಂಖ್ಯಾವಾರು ಹೆಚ್ಚು ಪ್ರಾತಿನಿಧ್ಯವನ್ನು ಆ ವಿಶೇಷ ಜನಾಂಗಕ್ಕೆ ಕೊಟ್ಟು, ಅವರ ಏಳಿಗೆ ಬಗ್ಗೆ ಅವರೇ ಶಿಫಾರಸುಗಳನ್ನು ಮಾಡುವ ಅವಕಾಶ ಕಲ್ಪಿಸಿದ್ದೇವೆ. ಹರಿಜನರ ಅಡ್‌ವೈಸರಿ ಬೋರ್ಡಿನಲ್ಲಿ ನಾಲ್ಕು ಉಪಸಮಿತಿಗಳನ್ನು ರಚಿಸಿದ್ದೇವೆ—ಒಂದು ವಿದ್ಯಾಭ್ಯಾಸಕ್ಕೆ, ಒಂದು ಉದ್ಯೋಗಕ್ಕೆ, ಒಂದು ಅನ್ಪ್ರಶ್ಯತಾ ನಿವಾರಣೆಗೆ, ಒಂದು ಎಕನಾಮಿಕ್ ಏಳಿಗೆ. ಈ ನಬ್‌ಕಮಿಟಿಗಳಲ್ಲಿ ಆಯಾ ಇಲಾಖೆಗೆ ಸಂಬಂಧಪಟ್ಟ ಮಂತ್ರಿ ಗಳೂ, ಉಪ ಮಂತ್ರಿಗಳೂ ಇರುತ್ತಾರೆ. ಆ ಉಪ ಸಮಿತಿಗಳಲ್ಲಿ ಕೊಡತಕ್ಕಂಥ ಸಲಹೆಗಳನ್ನು ಅಡ್‌ವೈಸರಿ ಕಮಿಟಿ ಮುಂದೆ ಇಡುತ್ತೇವೆ. ಸರಕಾರಕ್ಕೆ ನ್ಯಾಯವಾದ ರೀತಿಯಲ್ಲಿ ನೂಚಿಸಿ ಏನೇನು ಸಹಾಯ ಪಡೆಯಬೇಕೋ, ಅದಕ್ಕೆ ಪ್ರತಿಯೊಂದು ಕಡೆಯೂ ಬಹಳ ವಿಚಕ್ಷಣೆಯಿಂದ ಅವಕಾಶ ಮಾಡಿಕೊಟ್ಟಿದ್ದೇವೆ.

ವಿದ್ಯಾಧರ ಗುರೂಜಿ ಸಾಯಣ್ಣ.—(ಹಿಂದಿ)

ಶ್ರೀಮತಿ ಯಶೋಧರ ದಾಸಪ್ಪ.—ಆ ಅಡ್‌ವೈಸರಿ ಬೋರ್ಡಿನಲ್ಲಿ ಬರೀ ಹರಿಜನರೇ ಇಲ್ಲ: ಪೆಜ್ಜಾರಿಟಿ ಅವರೇ ಇದ್ದಾರೆ. ತಾಲ್ಲೂಕು ಬೋರ್ಡಿನವರು, ಡೆಪ್ಯುಟಿ ಕಮಿಷನರು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು, ಎಲ್ಲರೂ ಇರುವುದರಿಂದ ಅವರ ಯೋಗಕ್ಷೇಮ, ಅವರ ರಕ್ಷಣೆಗಳನ್ನು ಯಾವಾಗಲೂ ಈಡೇರಿಸುವುದಕ್ಕೆ ಪ್ರಯತ್ನ ಪಡುತ್ತಾರೆ. ಅನ್ಪ್ರಶ್ಯತಾ ಎಂಬ ಹೆಸರನ್ನು ತೆಗೆದು ಹಾಕಿ ಬಿಟ್ಟರೆ ಸರಿಸಮಾನತೆ ಬರುತ್ತದೆಯೇ? ಅದರ ನಿವಾರಣೆಗೆ ಇತರ ಕೋಮಿನವರೂ ಮನಸ್ಸು ಕೊಡಬೇಕು. ಅದಕ್ಕೂ ಏರ್ಪಾಡು ಮಾಡಿದೆ. ಸರಕಾರ ಒಂದು ಕಾನೂನು ರಚಿಸಿದೆ ಹರಿಜನರ ಉದ್ಧಾರವಾಗಬೇಕೆಂದು ಗಾಂಧಿಜಿಯವರು ಹೇಳಿದರೂ ಕೂಡ, ಅವರ ಸ್ಥಿತಿ ನುಧಾರಿತವಾಗದೆ ಹೋದರೆ ಯಾರದು ತಪ್ಪು?

Mr. DEPUTY SPEAKER.—The time allotted is nearly over. I think we should require more time. How much more time does the Hon'ble Minister require?

Smt. YASHODARA DASAPPA.—I want twenty minutes.

Sri M. V. RAMA RAO (Minister for Law).—I require five minutes.

Sri J. P. SARWESH (Serum).—I will take only 5 minutes.

Sri A. P. APPANNA.—I move that the time be extended by half an hour.

Mr. DEPUTY SPEAKER.—Is it the wish of the House that the time should be extended by half an hour?

HONOURABLE MEMBERS: Yes.

† ಶ್ರೀಮತಿ ಯಶೋಧರ ದಾಸಪ್ಪ.—ಈಗ ಮಾನ್ಯ ಸದಸ್ಯರ ಉದ್ದೇಶವೇನಿತ್ತು ಎನ್ನುವುದನ್ನೂ ನಾನು ತಿಳಿದುಕೊಂಡಿದ್ದೇನೆ. ಆದರೆ ಹೆಚ್ಚಿಗೆ ಸಮಯವನ್ನು ಇದಕ್ಕಾಗಿ ಉಪಯೋಗಿಸಿಕೊಳ್ಳುವುದಿಲ್ಲ. 19 ಜನ ಸದಸ್ಯರು ಸೈನ್ ಮಾಡಿ ಏತಕ್ಕೋಸ್ಕರ ರಾಜಿನಾಮೆ ಕೊಟ್ಟಿದ್ದರು ಎನ್ನುವ ವಿಚಾರವನ್ನು ಹೇಳಬೇಕೆಂದು ಕೇಳುತ್ತಿದ್ದಾರೆ. ಈ ಅಡ್ವೈಸರಿ ಬೋರ್ಡ್‌ಗಳನ್ನು ರಚಿಸಿದಾಗ ವರ್ಷಕ್ಕೆ ಎರಡು ಸಲ ಇವು ಸೇರಬೇಕೆಂದೂ, ಬೇಕಾದಾಗ ಮತ್ತು ಅಂಥ ಅಗತ್ಯವಾದ ವಿಷಯಗಳಿದ್ದರೆ ಹೇರ್ಮನ್ನರು ಆ ಸಭೆಯನ್ನು ಪುನಃ ಕರೆಯಬಹುದೆಂದೂ ಇತ್ತು. ಎರಡು ಸಲ ಈ ಸಭೆಯನ್ನು ಕರೆದಾಯಿತು. ಇದರಲ್ಲಿ ನಾಲ್ಕು ನಬ್ ಕಮಿಟಿಗಳದ್ದುವು ಅವೂ ಕೂಡ ಒಂದೊಂದು ಸಲ ಸಭೆ ಸೇರಿ ಅದರ ನಿರ್ಣಯಗಳನ್ನು ಸಭೆಯ ಮುಂದೆ ತರಬೇಕಾಗಿತ್ತು. ಆದುದರಿಂದ, ಸಾಕಷ್ಟು ಪೆಚ್ಚಾಗುತ್ತಿರುವ ಸಮಯದಲ್ಲಿ ಒಂದು ಸಭೆ ಕರೆದರೆ ಎಷ್ಟು ಖರ್ಚಾಗುತ್ತದೆಂದು ತಿಳಿದುಕೊಳ್ಳಿ. 43 ಜನ ಸದಸ್ಯರೂ, ನುಮಾರು 10-15 ಜನ ಆಫೀಸರುಗಳೂ ಸೇರಿ 58 ಜನರಿರುವ ದೊಡ್ಡ ಅಡ್ವೈಸರಿ ಕಮಿಟಿ ಇರುವುದರಿಂದ, ನಬ್ ಕಮಿಟಿಗಳು ಬಲ್ಲ ಸೇರಿ ಈಗಾಗಲೇ

ಒಂಬತ್ತು ಸಾವಿರ ರೂಪಾಯಿ ಖರ್ಚಾಗಿದೆ. T.A. ಮತ್ತು D.A.ಗಾಗಿ ಈ ಹಣ ಖರ್ಚಾಗಿದೆ. ಆದುದರಿಂದ ವಿಧಾನಸಭೆಯ ಅಧಿವೇಶನ ನಡೆಯುವ ಸಮಯದಲ್ಲಿ ಸಬ್ ಕಮಿಟಿಯವರು ಸೇರಿ ವಿಷಯಗಳನ್ನು ವಿಚಾರಮಾಡಿ ಅವರ ಅನುಭವಪೂರಿತವಾದ ತರಾವುಗಳನ್ನು ದೊಡ್ಡ ಸಭೆಯ ಮುಂದೆ ತಂದು, ಅದು ಏನು ಸಲಹೆಗಳನ್ನು ಮಾಡುತ್ತದೆಯೋ ಆ ಮುಖೇನ ಸರ್ಕಾರಕ್ಕೆ ಬಂದು ಸರ್ಕಾರ ಏನೇನು ಕಾರ್ಯಗತ ಮಾಡಬಹುದೋ ಅದನ್ನು ಮಾಡುತ್ತದೆ. ಹೀಗೆ ಸಲಹೆ ಮಾಡುವುದಕ್ಕೆ ಅಡ್ವೈಸರಿ ಕಮಿಟಿ ಇರುವುದು. ಈಗಾಗಲೇ ಈ ಸಮಿತಿಯವರು ತಂದಿರತಕ್ಕ ತರಾವುಗಳಲ್ಲಿ ಅನೇಕ ತರಾವುಗಳು ಕಾರ್ಯರೂಪಕ್ಕೆ ಬಂದಿರುವುದನ್ನು ನಾನು ಈ ಮಾನ್ಯ ಸಭೆಗೆ ಸ್ಯಕ್ಕೋಸ್ಟೈರ್ ಮಾಡಿ ಆ ವಿಚಾರಗಳನ್ನೆಲ್ಲ ಅರ್ಥವಾಗುವಂತೆ ಕೂಡುವುದಕ್ಕೆ ಸಿದ್ಧವಾಗಿದ್ದೇನೆ, ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ, ಇರತಕ್ಕ ಸಮಯದಲ್ಲಿ ಎಲ್ಲವನ್ನೂ ಇಲ್ಲಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಒಂದು ಸಾರಿ ಮಂಗಳೂರಿನಲ್ಲಿ, ಇನ್ನೊಂದು ಸಾರಿ ಕೊಳ್ಳೇಗಾಲದಲ್ಲಿ ಪಿಂಟಿಂಗ್ ಕರೆಯುವುದನ್ನು ದಯವಿಟ್ಟು ನಿಲ್ಲಿಸುವುದಕ್ಕೆ ಆಗುತ್ತದೆಯೇ?

ಶ್ರೀಮತಿ ಯಶೋಧರ ದಾಸಪ್ಪ.—ಹೆಚ್ಚಿಗೆ ಖರ್ಚಾಗುವ ಬಾಬುಗಳೇನಿವೆಯೋ ಅವುಗಳನ್ನು ನಾನು ನಿಲ್ಲಿಸಿದ್ದೇನೆ. ತಾವು ಖಂಡಿತವಾಗಿ ತಿಳಿಯಬೇಕು, ಈ ಮಂತ್ರಿ ಕೇವಲ ಟೀಕೆಗಳಿಗೆ ಹೆದರುವುದಿಲ್ಲ. ಹಣ ದುರುಪಯೋಗವಾಗುವುದಕ್ಕೆ ಅವಕಾಶ ಕೊಡುವುದಿಲ್ಲ. ಒಂದು ವೇಳೆ ಹತ್ತು ಸಾವಿರ, ಇಪ್ಪತ್ತು ಸಾವಿರ ರೂಪಾಯಿಗಳನ್ನು ಈ ಸಭೆಗಳಿಗೆ ಖರ್ಚಾಮಾಡದೆ ಆ ಹಣವನ್ನು ಬಾವಿಗಳಿಗೆ ಮುಂತಾದದ್ದಕ್ಕೆ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ನನಗೆ ಅನುಭವದಿಂದ ತಿಳಿದಿರುವುದನ್ನು ಧೈರ್ಯವಾಗಿ ಈ ಸಭೆಗೆ ಹೇಳುವುದಕ್ಕೆ ಹಿಂಜರಿಯುವುದಿಲ್ಲ. ಅವಶ್ಯಕತೆ ಇದ್ದಾಗ ಖಂಡಿತ ಈ ಸಭೆ ಸೇರಬೇಕು, ಅವರು ವಿಚಾರ ವಿನಿಮಯ ಮಾಡಬೇಕು, ಆ ಜನಾಂಗದ ಹಿತರಕ್ಷಣೆ ಮಾಡಬೇಕು ಎನ್ನುವುದರಲ್ಲಿ ಸಂಪೂರ್ಣವಾದ ಸಮ್ಮತಿ ಇದೆ.

11-00 A.M.

ಕೆಲವರು ಉದ್ವೇಗದಿಂದ ಮಾತನಾಡಿದರೂ ಕೂಡ ಆ ಜನಗಳ ಹಿತದೃಷ್ಟಿಯಿಂದ, ಆ ಜನಗಳು ನೊಂದು ಬೆಂದಿರುವುದರಿಂದ ಬಹಳ ಸಂಕಟದಿಂದ ಕೆಲವು ವಿಚಾರಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅದು ಇಲ್ಲವೆಂದು ನಾನು ಹೇಳುವುದಿಲ್ಲ. ಅನೇಕ ಜನ ಈ ರೀತಿ ತೊಂದರೆಯಲ್ಲಿರತಕ್ಕವರ ವಿಚಾರ ಮಾತನಾಡಿದರು; ಅಷ್ಟೇ. ಶ್ರೀಮಾನ್ ಕೆ. ಎಚ್. ರಂಗನಾಥ್ ಮತ್ತು ಶ್ರೀಮಾನ್ ಎ. ಕೃಷ್ಣಯ್ಯಶೆಟ್ಟರು ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತಂದರು. ಎಲ್ಲ ಜನಾಂಗಗಳಲ್ಲಿಯೂ ಹಿಂದುಳಿದ ಜನಾಂಗ ಅಭಿವೃದ್ಧಿಯಾಗಬೇಕು ಎಂದು ಹೇಳಿದರು. ಶ್ರೀಮಾನ್ ಕೃಷ್ಣಶೆಟ್ಟರು ಕೂಲಿಕಾರರ ವಿಚಾರ, ಬಡವರು, ಅಭೂತ ಮೂಲೆಯಲ್ಲಿರುವವರ ವಿಚಾರವಾಗಿ ಹೇಳಿದರು. ತಿಳುವಳಿಕೆ ಇಲ್ಲದವರು, ಸರ್ಕಾರದಲ್ಲಿ ಇಂಥ ಅವಕಾಶವಿದೆ ಅದನ್ನು ಉಪಯೋಗಿಸಿಕೊಳ್ಳಬೇಕು ಎನ್ನುವ ತಿಳುವಳಿಕೆ ಕೂಡ ಇಲ್ಲದಂಥ ಜನ ಅಭೂತ ಮೂಲೆಯಲ್ಲಿ ಲಕ್ಷೋಪಲಕ್ಷ ಜನರಿದ್ದಾರೆ. ಅವರ ಹಿತವನ್ನು ರಕ್ಷಣೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಯಾರು ಹೇಳುವುದಕ್ಕೆ ಶಕ್ತಿ ಇರತಕ್ಕವರೋ ಅಂಥವರು ಇಲ್ಲಿ ಹೇಳಬಲ್ಲರು. ಅನೇಕರಿಗೆ ಸರ್ಕಾರ ಎಲ್ಲದೆ, ಯಾವ ಜನ ಅಲ್ಲಿದ್ದಾರೆ ಎನ್ನುವ ತಿಳುವಳಿಕೆ ಇಲ್ಲದವರೂ, ತಮಗೆ ಏನು ಸಹಾಯ ಬೇಕು ಎಂದು ಕೇಳುವುದಕ್ಕೆ ಬಾಯಿ ಇಲ್ಲದವರ ಹಿತರಕ್ಷಣೆ ಮಾಡುವುದು ಸರ್ಕಾರದ ಮುಖ್ಯ ಕರ್ತವ್ಯವಾಗಿದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಈ ಕೆಲಸಗಳಿಗೆ ಹಣವನ್ನು ಒದಗಿಸಿರುವುದು ಸಾಲದು. ಇರತಕ್ಕದ್ದೇ ಸ್ವಲ್ಪ ಹಣ. ಆ ಹಣದಲ್ಲಿ ಏನು ಸುಧಾರಣೆಗಳಾಗಬಹುದೆನ್ನುವುದು ತಮಗೆ ಗೊತ್ತಿದೆ. ಯಾರು ಯಾರಿಗೆ ಮೊದಲು ಅದು ಸಲ್ಲಬೇಕು ಎಂದು ತಿಳಿದುಕೊಂಡು ಆ ಮುಖೇನ ಹಣವನ್ನು ಸದ್ವಿನಿಯೋಗ ಮಾಡಿದರೆ, ಇರುವ ಹಣದಲ್ಲಿಯೇ ಅನೇಕ ಜನರ ಕಷ್ಟ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿದುಕೊಂಡಿರುತ್ತೇನೆ.

ಇನ್ನೊಂದು ವಿಚಾರವನ್ನು ಎಲ್ಲರೂ ಹೇಳಿದರು. 17 ಜನ ಆಫೀಸರುಗಳನ್ನು ಕೆಲಸದಿಂದ ಏಕೆ ತೆಗೆದರಿ? ಅದನ್ನು ಪಾಡಬಾರದಾಗಿತ್ತು ಎಂದು. ಮೂರು ವರ್ಷದಿಂದ ಈ ವಿಚಾರ ಸರ್ಕಾರದ ಗಮನದಲ್ಲಿದೆ. ಈ 17 ಜನ ಆಫೀಸರುಗಳೂ ಬುದ್ಧಿವಂತರು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಅವರಲ್ಲಿ ಯೋಗ್ಯರೂ ಇದ್ದಾರೆ, ಅನೇಕರು ಅನುಭವಿಗಳೂ ಇದ್ದಾರೆ. ಅವರನ್ನೂ ಸರ್ಕಾರದಲ್ಲಿ ತೆಗೆದುಕೊಳ್ಳುವುದರಲ್ಲಿ ನೀತಿ, ಕ್ರಮಗಳಿವೆ. ಅದನ್ನು ನಾನು ಯೋಚನೆ ಮಾಡಿದೆ. ವಿದ್ಯಾ ಇಲಾಖೆಯಲ್ಲಿ ಉಪಾಧ್ಯಾಯರಾಗಿದ್ದವರನ್ನೂ, ಸಹಕಾರ ಇಲಾಖೆಯಲ್ಲಿದ್ದವರನ್ನೂ, ಎಲೆಕ್ಟಿಸಿಟಿ ಬೋರ್ಡಿನಲ್ಲಿದ್ದವರನ್ನೂ, ಯಾವ ಯಾವದರಲ್ಲಿಯೋ ಇದ್ದವರನ್ನು ತೆಗೆದು

(ಶ್ರೀಮತಿ ಯಶೋಧರ ದಾಸಪ್ಪ)

ಕೊಂಡು ಬಂದು ಗೆಜೆಟೆಡ್ ಆಫೀಸರಾಗಿ ಮಾಡಿದರು. ಬಹಳ ಸಂತೋಷ. ಅವರನ್ನು ಸರಿಯಾದ ರೀತಿಯಲ್ಲಿ, ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ regularise ಮಾಡಿ ಅಯಾಯ ಸ್ಥಾನಗಳನ್ನು ಕೊಟ್ಟಿದ್ದರೆ ಖಂಡಿತವಾಗಿಯೂ ಇವತ್ತಿನ ದಿವಸ ಕೆಲಸ ಮಾಡುವುದಕ್ಕೆ ಆಗುತ್ತಿತ್ತು. ಮೂರು ವರ್ಷದಿಂದಲೂ ಅವರು ಯಾವ ಮುಖೇನ regularise ಆಗಬೇಕಾಗಿತ್ತೋ ಹಾಗೆ ಆಗದೆ ಇರುವುದರಿಂದ ಅವರಿಗೆ ಸಂಬಳ ಕೊಡಲು ಅಕೌಂಟೆಂಟ್ ಜನರಲ್ ಅವರಿಂದ ಆಕ್ಷೇಪಣೆ ಬಂದು ತೊಂದರೆಯಾಯಿತು. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕಳಿಸಿದರೆ ಅವರು ಒಪ್ಪುತ್ತಿರಲಿಲ್ಲ. ಹೀಗೆ ಆ Social welfare officers ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಐದಾರು ತಿಂಗಳಾದರೂ ಸಂಬಳ ಬರುತ್ತಿರಲಿಲ್ಲ. ಅವರನ್ನು regularise ಮಾಡಬೇಕಾದರೆ ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಬರಬೇಕು, ಅವರು ಹೇಗೆ ಆಗಬೇಕು ಎಂದು ಕಾನೂನು ಪ್ರಕಾರ ಸರಿಯಾದ ರೀತಿಯಲ್ಲಿ ಮಾಡುತ್ತಾರೆಯೋ ಅದರಂತೆ ನಾವು ನಡೆಯಬೇಕು. ಅಂದಮಾತ್ರಕ್ಕೆ ಈ 17 ಜನರ ವಿಷಯದಲ್ಲಿ ಸಹಾನುಭೂತಿ ಇಲ್ಲವೆಂದಲ್ಲ. ಅವರನ್ನು ಯಾವ ಯಾವ ಇಲಾಖೆಗೆ ಹೇಗೆ ಸೇರಿಸಿಕೊಳ್ಳಬೇಕು, ಯಾವ ರೀತಿ ಅವರ ರಕ್ಷಣೆಯಾಗಬೇಕು,—ಏಕೆಂದರೆ ಅವರೆಲ್ಲರೂ ವಿದ್ಯಾವಂತರು, ಅವಕಾಶ ಸಿಕ್ಕಿದರೆ ಚೆನ್ನಾಗಿ ಕೆಲಸ ಮಾಡತಕ್ಕ ಯುವಕರು—ಮುಂದೆ ಯಾವ ರೀತಿ ಅವರನ್ನು ನೇಮಿಸಿಕೊಳ್ಳಬಹುದು ಎಂದು ಸರ್ಕಾರ ಸಂಪೂರ್ಣ ಗಮನವಿಟ್ಟು ಆ ವಿಷಯವನ್ನು ನೋಡಬೇಕು. ಆದರೆ ಇದೇ ಇಲಾಖೆಯಲ್ಲಿಯೇ 17 ಜನರನ್ನು regularise ಮಾಡಲು ಆಗದೇ ಇದ್ದುದರಿಂದ ಅವರನ್ನು ತೆಗೆಯಬೇಕಾಯಿತು. ಈ 17 ಜನರಿಗೂ ಕೆಲಸವಿಲ್ಲದೆ ಬೀದಿಯಲ್ಲಿ ಅವರನ್ನು ಬಿಡಬೇಕು ಎನ್ನುವುದು ಸರ್ಕಾರದ ಅಭಿಪ್ರಾಯವಲ್ಲವೆಂದು ಈ ಸಭೆಗೆ ನಾನು ತಿಳಿಯಪಡಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಈ ಆಫೀಸರುಗಳು 1959ನೇ ಇಸವಿಯಲ್ಲಿ ರಿಕ್ರೂಟ್ ಆದವರು. ಆದರೆ 1962ನೇ ಇಸವಿಯಲ್ಲಿ ಆದ ಸರ್ಕಾರಿ ಆರ್ಡರ್ ಪ್ರಕಾರ 1-1-1960ಕ್ಕೆ ಮುಂಚೆ ಮೂರನೆ ದರ್ಜೆ ನೌಕರರ ಯಾರು ಯಾರು ನೇರವಾಗಿ ಕೆಲಸಕ್ಕೆ ಸೇರಿದ್ದರೋ ಅಂಥವರನ್ನೆಲ್ಲ ಖಾಯಂ ಮಾಡಬೇಕು. ಆ ಪ್ರಕಾರ ಇವರನ್ನೂ ತಕ್ಷಣ ಖಾಯಂ ಮಾಡಿದ್ದರೆ ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಸರ್ಕಾರ ಆ ರೀತಿ ಮಾಡದೆ ವಿಳಂಬ ಮಾಡಿದ್ದರಿಂದ ಇಂಥ ಪರಿಸ್ಥಿತಿ ಉದ್ಭವಿಸಿತಲ್ಲವೇ?

ಶ್ರೀಮತಿ ಯಶೋಧರ ದಾಸಪ್ಪ.—ಅವು ಗೆಜೆಟೆಡ್ ಆಫೀಸರ್ಸ್ ಪೋಸ್ಟ್ ಆಗಿದ್ದುದರಿಂದ ಅವುಗಳನ್ನು ಕೂಡಲೆ ರೆಗ್ಯುಲರೈಜ್ ಮಾಡುವುದಕ್ಕಾಗಲಿಲ್ಲ. ಅವುಗಳನ್ನು ಗೆಜೆಟೆಡ್ ಮಾಡಿದ್ದರಿಂದ ಈ ತೊಂದರೆಯುಂಟಾಯಿತು. ಆದುದರಿಂದ ಈ ಬಗ್ಗೆ—ಪುನಃ ಪರಿಶೀಲನೆ ಮಾಡಿ ತಿಳಿಸಬೇಕೆಂದು ತಿಳಿಸಲಾಗಿದೆ.

ಹರಿಜನರ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಹಣ ಕಡಿಮೆ ಕೊಡುತ್ತಿರುವುದಲ್ಲದೆ, ಹಣ ಅಪ್ಪು ಹೆಚ್ಚಾಗಿ ಖರ್ಚಾಗುತ್ತಿಲ್ಲ ಎಂದು ಒಬ್ಬ ಸದಸ್ಯರು ಹೇಳಿದರು. ಅದು ಸರಿಯಲ್ಲ. ಏನಾದರೂ ಹಣ ಉಳಿದರೆ ಅದನ್ನು ಜಾಗ್ರತೆ ಉಪಯೋಗಿಸಿಕೊಂಡು ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದೆ. ಈ ಜನಗಳ ಸಲುವಾಗಿ ಮೇಲ್ಮಟ್ಟಕ್ಕೆ ತರುವುದಕ್ಕೋಸ್ಕರ ಹಣ ಕಾದಿರಿಸಬೇಕೆಂದು ಕಮಿಟಿಯು ಸಹ ಶಿಫಾರಸು ಮಾಡಿದೆ.

ಸೆಕ್ರೆಟೇರಿಯಟ್ಟಿನಲ್ಲಿ ಫೈಲುಗಳ ಡಿಸ್ಪೋಜಲ್ ಬಹಳ ನಿಧಾನವಾಗುತ್ತಿದೆ ಎಂದು ಒಬ್ಬ ಮಾನ್ಯ ಸದಸ್ಯರು ಟೀಕೆ ಮಾಡಿದರು. ಆದರೆ ಶೇಕಡ 60ರಷ್ಟು ಫೈಲುಗಳು ಡಿಸ್ಪೋಜಲ್ ಆಗಿವೆ. ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತಿವೆ. ಡೈರೆಕ್ಟರೇಟಿನಲ್ಲಿ ಒಬ್ಬ ಐ.ಎ.ಎಸ್. ಅಧಿಕಾರಿಗಳ ನೇಮಕ ಮಾಡಿ ಹೆಚ್ಚು ಶ್ರದ್ಧೆಯಿಂದ ಚುರುಕಾಗಿ ಕೆಲಸ ಕಾರ್ಯಗಳನ್ನು ನಡೆಸಬೇಕೆಂದು ಮಾಡಿದೆ. ಆದರೆ ಅಕೌಂಟ್ಸ್ ವಿಚಾರದಲ್ಲಿ ಬಹಳ ತೊಂದರೆಯುಂಟಾಗಿದೆ. ಬೇರೆ ಬೇರೆ ಜಿಲ್ಲೆಗಳಿಂದ ಅನೇಕ ವೌಚರ್ಸ್ ಬಾರದೇ ಇರುವುದರಿಂದ ಹಣ ಕಳಿಸಲು ನಿಧಾನವಾಗುತ್ತಾ ಇದ್ದಿತು. ಲೆಕ್ಕಪತ್ರ ಸರಿಯಾಗಿ ಕಳಿಸದೇ ಇದ್ದರೆ ಅನೇಕ ತೊಂದರೆ ಉಂಟಾಗುತ್ತವೆ. 48.9 ಲಕ್ಷ ರೂಪಾಯಿ ಬಿಲ್ಲುಗಳಿಗೆ ವೌಚರ್ಸ್ ಇಲ್ಲದೇ ಇರುವುದರಿಂದ ಅವುಗಳನ್ನು ರೆಗ್ಯುಲರೈಜ್ ಮಾಡಲು ನಿಧಾನವಾಯಿತು. ಹಣ ಸ್ಯಾರೆಕ್ಷನ್ ಆಗಿದ್ದರೂ ಕೂಡ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎಂಬುದು ಕಂಡು ಬಂದುದರಿಂದ ಈ ಇವ್ಯಾಲ್ಯುಯೇಷನ್ ಆಫೀಸರ್ಸ್ ನೇಮಕ ಮಾಡಲಾಗಿದೆ. ಜಿಲ್ಲಾ ಕೇಂದ್ರದಲ್ಲಿ ಏನೇನು ಕೆಲಸ ಕಾರ್ಯಗಳು ನಡೆಯಬೇಕು ಎಂಬುದನ್ನು ನೋಡಿಕೊಳ್ಳಲು ಈ ಇವ್ಯಾಲ್ಯುಯೇಶನ್ ಆಫಿಸರರ ನೇಮಕ ಮಾಡಲಾಗಿದೆ. ಇವರು ಇವ್ಯಾಲ್ಯುಯೇಟ್ ಮಾಡಿದ ನಂತರ ಅವರ ರಿಪೋರ್ಟ್ ಇಂಡಿಯಾ ಸರಕಾರಕ್ಕೆ ಕಳಿಸಿ ಇನ್ನೂ ಹೆಚ್ಚು ಹಣ ಕೇಂದ್ರ ಸರಕಾರದಿಂದ ಕೇಳಬಹುದು. ಇದರಿಂದ

ಹೊಸ ಹೊಸ ಯೋಜನೆಗಳನ್ನು ತೆಗೆದು ಕೊಳ್ಳಲು ಅವಕಾಶವಾಗುತ್ತದೆ ಎಂದು ಅವರನ್ನು ನೇಮಕ ಮಾಡಿದ್ದೇವೆ.

ಈ ಬಾಬಿಗೆ ಒದಗಿಸಿರತಕ್ಕಂಥ ಹಣ ಲ್ಯಾಪ್ಸ್ ಆಗಬಾರದೆಂದು ನೋಡಿಕೊಳ್ಳಲಾಗುತ್ತಿದೆ. ಹೋದ ವರ್ಷ 70 ಲಕ್ಷ ಒದಗಿಸಿದ್ದರೆ 72 ಲಕ್ಷ ಖರ್ಚು ಮಾಡಿದ್ದೇವೆ. ಮಾರ್ಚ್ ತಿಂಗಳ ಕೊನೆಯಲ್ಲಿ ಹಣ ಲ್ಯಾಪ್ಸ್ ಆಗಬಾರದೆಂದು 4—5 ಲಕ್ಷ ರೂಪಾಯಿ ಸ್ಕಾಲರ್‌ಷಿಪ್ ಮುಖೇನ ಕೊಟ್ಟಿದ್ದೇವೆ.

ಹರಿಜನರಿಗಾಗಿ ಪ್ರತ್ಯೇಕ ಹಾಸ್ಟೆಲ್ ಮಾಡುವುದು ಬೇಡ ಎಂದು ಎಲ್ಲಾ ಜನಗಳನ್ನೂ ಸೇರಿಸಿ ಬೇಕೆಂದು ಜನರಲ್ ಹಾಸ್ಟೆಲ್ ಮಾಡಿದೆ. ಜನರಲ್ ಹಾಸ್ಟೆಲ್ಲಿನಲ್ಲಿ ಸವರ್ಣೀಯರು, ಬ್ರಾಹ್ಮಣರು ಎಲ್ಲಾ ಜಾತಿಯವರಿಗೂ ಅವಕಾಶ ಮಾಡಿಕೊಡಲಾಗಿದೆ. ಜಾತಿಯ ಮೇಲೆ ಇದನ್ನು ಇಟ್ಟುಕೊಳ್ಳದೆ ಪಾವರ್ಟಿ ಅಂದರೆ ಬಡತನ ಕ್ರೈಟೀರಿಯನ್ ಆಗಿ ಇಟ್ಟುಕೊಳ್ಳಲಾಗಿದೆ. ಕೆಳಮಟ್ಟದಲ್ಲಿರುವವರನ್ನು ಮೇಲ್ಮಟ್ಟಕ್ಕೆ ತರಲು ಇಂಥ ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲ ಕಡೆಗೂ ಇದೇ ರೀತಿ ಜನರಲ್ ಹಾಸ್ಟೆಲ್ ನಡೆಸಬೇಕೆಂಬ ಇಚ್ಛೆ ಇದೆ.

ಇನ್ನು ಹೌಸಿಂಗ್ ವಿಚಾರ ಹೇಳುವುದಾದರೆ ಎಲ್ಲರಿಗೂ ಗೊತ್ತಿರುವ ಹಾಗೆ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಹಣ ಉಪಯೋಗಿಸ ಬೇಕೆಂದು ತೀರ್ಮಾನ ಮಾಡಿದೆ. ಆದುದರಿಂದ ಕೋ ಆಪರೇಟಿವ್ ಸೊಸೈಟಿ ಮುಖೇನ ಸಾಲ ತೆಗೆದುಕೊಂಡು ಮನೆ ಕಟ್ಟಿಸಬೇಕೆಂಬ ಯೋಚನೆ ಇದೆ. ಮನೆ ಕಟ್ಟಿಸಿ ಕೊಡುವ ವಿಚಾರದಲ್ಲಿ ಸರಕಾರಕ್ಕೆ ತೀವ್ರ ಆಸಕ್ತಿ ಇದೆ. ಇದರ ಬಗ್ಗೆ ಯಾರೂ ಏನೂ ಅನುಮಾನ ಪಡಬೇಕಾಗಿಲ್ಲ.

ಇನ್ನು ಎಕನಾಮಿಕ್ ಏಡ್ ಕೊಡುವ ವಿಚಾರದಲ್ಲಿ ಹಣ ಸರಿಯಾಗಿ ವ್ಯಯವಾಗುತ್ತಾ ಇದೆ. ಪ್ರೊಡಕ್ಷನ್ ಸೆಂಟರುಗಳಿಗೆ ಹೆಚ್ಚಿನ ಉತ್ತೇಜನ ಕೊಡಲಾಗುತ್ತಿದೆ. ಹಣ ಸರಿಯಾಗಿ ಒದಗಿಸಲಾಗಿದೆ. ಇದರಿಂದ ಹೆಚ್ಚಿನ ಅನುಕೂಲವಾಗುತ್ತದೆಂದು ನಂಬಲಾಗಿದೆ.

ಇನ್ನು ಸಮಾಜ ಕಲ್ಯಾಣ ಕೇಂದ್ರಗಳಲ್ಲಿ ಅಧಿಕಾರಿಗಳು ಸಹಾನುಭೂತಿಯಿಂದ ನಡೆಯುತ್ತಿಲ್ಲ ಮತ್ತು ಏನಾದರೂ ಸಹಾಯ ಕೇಳುವುದಕ್ಕೆ ಹೋದರೆ ಬಹಳ ಒರಟಾಗಿ ಮನ ನೋಯುವಂತೆ ಉತ್ತರ ಕೊಡುತ್ತಾರೆಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಇಂಥ ವಿಚಾರ ನನಗೆ ತಿಳಿದ ಕೂಡಲೆ ನಾನು ಉನ್ನತ ಅಧಿಕಾರಿಗಳನ್ನು ಕರೆಸಿ ವಿಚಾರಿಸಿದೆನು. ಅಂಥ ಯಾವ ಘಟನೆಯೂ ನಡೆದಿಲ್ಲ, ಯಾರೂ ಹಾಗೆ ಕೇಳುವುದಕ್ಕೆ ಬಂದಿಲ್ಲ ಮತ್ತು ಆ ರೀತಿ ಉತ್ತರ ಸಹ ಕೊಟ್ಟಿಲ್ಲ ಎಂದು ಅಧಿಕಾರಿಗಳು ಹೇಳಿದರು. ಆದುದರಿಂದ ಉನ್ನತ ಅಧಿಕಾರಿಗಳ ಬಗ್ಗೆ ಈ ರೀತಿ ಟೀಕೆ ಟಿಪ್ಪಣಿ ಮಾಡುವುದು ಸರಿಯಲ್ಲ. ಅಂಥ ಅಧಿಕಾರಿಗಳು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಇಲ್ಲಿ ಇರುವುದಿಲ್ಲ. ಯಾವುದೇ ಟೀಕೆ ಕನ್‌ಸ್ಟ್ರಕ್ಟಿವ್ ಆಗಿರಬೇಕು, ನ್ಯಾಯವಾಗಿರಬೇಕು. ಆದುದರಿಂದ ಇಂಥ ಟೀಕೆ ಮಾಡುವುದು ಸರಿಯಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಒಂದು ವೇಳೆ ಅಧಿಕಾರಿಗಳಲ್ಲಿ ಎನಾದರೂ ಲೋಪದೋಷಗಳು ಇದ್ದರೆ ಅಂಥಾದ್ದನ್ನು ವಿಚಾರ ಮಾಡೋಣ. ಆದರೆ ಯಾರೋ ಏನೋ ಹೇಳಿದ್ದನ್ನು ಕೇಳಿಕೊಂಡು ಅನತ್ಯವಾದ ಸಂಗತಿ ಹೀಗೆ ಹೇಳುವುದು ಸರಿಯಲ್ಲ. ನಿಜವಾಗಿಯೂ ಹೇಳಬೇಕಾದರೆ ಈ 17 ಜನ ಅಧಿಕಾರಿಗಳನ್ನು ಬೇರೆ ಯಾವುದಾದರೂ ಸ್ಥಾನದಲ್ಲಿ ರೀಹ್ಯಾಬಿಲಿಟೇಟ್ ಮಾಡಲು ವಿಚಾರ ಮಾಡುತ್ತಿದ್ದೇವೆ. ಈ ವಿಚಾರ ತಿಳಿದ ಕೂಡಲೆ ತಕ್ಷಣ ಫೈಲ್ ತರಿಸಿ ಪರಿಶೀಲನೆ ಮಾಡಲು ಅಧಿಕಾರಿಗಳಿಗೆ ತಿಳಿಸಲಾಗಿದೆ. ಅವರನ್ನು ಬೇರೆ ಸ್ಥಾನದಲ್ಲಿ ನೇಮಕ ಮಾಡಲಾಗುವುದು.

ಇದಲ್ಲದೆ ಇನ್ನೂ ಹೆಚ್ಚಿನ ಉನ್ನತ ಶಿಕ್ಷಣ ಕೊಡಬೇಕೆಂದು ಉದ್ದೇಶದಿಂದ ಬೆಂಗಳೂರಿನಲ್ಲಿ ಐ.ಐ.ಎಸ್. ಮತ್ತು ಐ. ಪಿ. ಎಸ್ ಶಿಕ್ಷಣ ಕೊಡುವುದನ್ನು ಪ್ರಾರಂಭಮಾಡಿದ್ದೇವೆ. ಹೆಚ್ಚು ವಿದ್ಯಾವಂತರಿಗೆ ಇದರಿಂದ ಅನುಕೂಲವಾಗುತ್ತದೆ. ವಿದ್ಯಾ ಇಲಾಖೆಗೆ ಹಾಸ್ಟೆಲ್ಲುಗಳನ್ನು ವಹಿಸಿ ಕೊಡಬೇಕೆಂದು ಬಹಳ ತೀವ್ರವಾಗಿ ಚರ್ಚೆ ಮಾಡಿದರು. ಎಜುಕೇಷನ್ ಡಿಪಾರ್ಟ್‌ಮೆಂಟ್ ಆಗಲಿ ಪೋಷಿಯರ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಆಗಲಿ ಸರಕಾರ ಕೆಲಸ ಮಾಡುವಾಗ್ಗೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿಯಿಂದ ಕೆಲಸ ಮಾಡಲಾಗುತ್ತದೆ. ಸರಕಾರ ಜವಾಬ್ದಾರಿಯಿಂದ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದೆ. ಮಕ್ಕಳಿಗೆ ಯಾವ ತೊಂದರೆಯಾಗದ ಹಾಗೆ ನೋಡಿಕೊಳ್ಳುತ್ತಿದ್ದೇವೆ. ಇನ್ನು ನಾನು ಮಾತನ್ತಾಡಲು ಹೆಚ್ಚು ಕಾಲಾವಕಾಶ ತೆಗೆದು ಕೊಳ್ಳುವುದಿಲ್ಲ. ಶ್ರೀ ಸರ್ವೇಶ ಅವರ ನಿರ್ಣಯಕ್ಕೆ ಎಲ್ಲಾ ಮಿನಿಸ್ಟರುಗಳು ಉತ್ತರ ಕೊಡುತ್ತಾರೆ. ಈ ನಿರ್ಣಯದ ಮೇಲೆ ನಡೆದ ಚರ್ಚೆಯಿಂದ ಅನೇಕ ಅಂಶಗಳು ಸರಕಾರದ ಗಮನಕ್ಕೆ ಬಂದಿವೆ. ಒಂದು ವಿಚಾರ ಮಾತ್ರ ಹೇಳಬೇಕಾಗಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಚೇರ್‌ಮನ್, ಲೇಬರ್ ಕಮಿಷನರ್, ಮುಂತಾದ ಎಲ್ಲ ಕೀ ಪೋಸ್ಟ್‌ಗಳಲ್ಲಿ ಇಂದು ಹರಿಜನರೇ ಅಧಿಕಾರಿಗಳಾಗಿ ಇದ್ದಾರೆ. ಅವರು ಹರಿಜನರ ಹಿತ ರಕ್ಷಣೆ ಮಾಡುತ್ತಾರೆ. ಅದರೆ ಜೊತಗೆ ಉಳಿದವರ ಹಿತ ರಕ್ಷಣೆ ಸಹ ಮಾಡುತ್ತಾರೆ. ಅದು ಒಳ್ಳೆಯದು. ಹಿಂದುಳಿದವರ ಬಗ್ಗೆ ಸರಕಾರ ಮಾಡಬೇಕೆಂದು ಸಾರ್ವಜನಿಕರು ಹೇಳುತ್ತಾ ಸಾರ್ವಜನಿಕರು

(ಶ್ರೀಮತಿ ಯಶೋಧರ ದಾಸಪ್ಪ)

ಮುಂದೆ ಬಂದು ಕೆಲಸ ಮಾಡಬೇಕೆಂದು ಸರಕಾರ ಹೇಳುತ್ತದೆ. ಸರಕಾರ ಮಾಡಲಿಲ್ಲ ಎಂದು ಸಾರ್ವಜನಿಕರು ಹೇಳುವುದು ಸಾರ್ವಜನಿಕರು ಮಾಡಿಲ್ಲ ಬಂದು beneficiaries ಹೇಳುವುದು ಹೀಗೆ ಇದರಲ್ಲಿ ತ್ರಿದೋಷ ಕೂಡಿದೆ. ಎಲ್ಲ ಸರಕಾರವೇ ಮಾಡಬೇಕೆಂದು ಹೇಳುವುದು ಸರಿಯಲ್ಲ. ನಾನಾ ರೀತಿ ಘಟ್ಟದಲ್ಲಿ ಸರಕಾರ ಸರ್ವ ರೀತಿಯಿಂದಲೂ ಪ್ರಯತ್ನ ಮಾಡುತ್ತಿದೆ. ನ್ಯಾಯವಾಗಿ ಹಣ ಬಿದಿಗಿನ ರಾಗುತ್ತಿದೆ. ಇದರಲ್ಲಿ ಸ್ವಲ್ಪ ನಿಧಾನವಾಗುತ್ತದೆ. ದೋಷ ದೋಷಗಳು ಇದ್ದರೆ ತಿಳಿಸಬೇಕು ಅಂದರೆ ಸರಿಪಡಿಸುತ್ತೇವೆ. ಸಾರ್ವಜನಿಕರಿಗೂ ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ: ಈ ರೋಗ ನಿವಾರಿಸುವುದಕ್ಕೆ ಪ್ರಯತ್ನ ನಾವು ನೀವು ಕಲಿತು ಮಾಡತಕ್ಕದ್ದು ಅತ್ಯಗತ್ಯವಾಗಿದೆ.

ಇನ್ನು ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಒಂದು ಸಬ್ ಕಮಿಟಿ ನೇಮಕ ಮಾಡಲಾಗಿದೆ. ಮಂತ್ರಿಗಳು ಸದಸ್ಯರು ವಿಧಾನ ಸೌಧದಲ್ಲಿ ಅಸ್ಪೃಶ್ಯತಾ ತೆಗೆದು ಹಾಕಿ ಬಿಟ್ಟರೆ ಹಳ್ಳಿಗಳಲ್ಲಿ ಅದು ಸರಿ ಹೋಗುತ್ತದೆ ಎಂದು ಒಬ್ಬ ಮಾನ್ಯ ಸದಸ್ಯರು ಈ ಸಭೆಯಲ್ಲಿ ಹೇಳಿದರು.

ಇದು ಗಾಂಧಿ ಯುಗ ಆದ್ದರಿಂದ ಏನು ಹೇಳುತ್ತೇವೆಯೋ ಅದನ್ನು ಕಾರ್ಯಾಚರಣೆ ಮಾಡಬೇಕು. ಎಲ್ಲರೂ ಭಾಷಣ ಮಾಡಿ ಉಪದೇಶ ಮಾಡುವುದಕ್ಕೆ ಹೋದರೆ ಕಾರ್ಯಗತಮಾಡುವವರು ಯಾರು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ಈ ಕೆಲಸ ಮಾಡುವುದು ಅಷ್ಟೊಂದು ಸುಲಭವಲ್ಲ. ಹಳ್ಳಿಗಾಡಿನಲ್ಲಿ ತಿಳಿವಳಿಕೆ ಇಲ್ಲದೆ ಜನರ ಮಧ್ಯೆ ಸುಧಾರಣೆ ಮಾಡಬೇಕಾದರೆ ಎಷ್ಟು ತೊಂದರೆ ಇದೆ ಎಂಬುದನ್ನು ನೋಡಬೇಕು ! ಅಲ್ಲದೇ ಕೊಟ್ಟ ಹಣವನ್ನು ಒಂದು ಮನಗೆ 400 ರೂಪಾಯಿ ಕೊಟ್ಟರೆ 400 ರೂಪಾಯಿಯೂ ಅವನಿಗೆ ಸೇರಿದೆಯೇ ಎಂಬುದನ್ನೂ ಸಹ ಮಾನ್ಯ ಸದಸ್ಯರು ನೋಡಿ ನನಗೆ ತಿಳಿಸಿದರೆ ಖಂಡಿತವಾಗಿಯೂ ನಾನು ಎಲ್ಲಿಯವರೆಗೆ ಬೇಕಾದರೂ ಸಹಾಯ ಮಾಡುವುದಕ್ಕೆ ಸಿದ್ಧವಾಗಿದ್ದೇನೆ. ಏಕೆಂದರೆ ಅನೇಕರು ನನಗೆ ಪ್ರಶ್ನೆ ಕೇಳಿದರು ಕೇಳಿದಾಗ ಆಫಿಷಿಯಲ್ ಆಗಿಯೇ ಹೇಳಿದ್ದೇನೆ. ಇದರ ಹಿನ್ನೆಲೆ ಏನೆಂಬುದನ್ನು ಸರ್ಕಾರದವರು ಸದಸ್ಯರು ಎಲ್ಲರೂ ತಿಳಿದು ಕೊಂಡಿದ್ದಾರೆ ಅದನ್ನು ಮರೆತಿಲ್ಲ.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಈ ಎಡಗೈ ಬಲಗೈ ವಿಷಯ ಸ್ವಲ್ಪ ಹೇಳಿ.

ಶ್ರೀಮತಿ ಯಶೋಧರ ದಾಸಪ್ಪ.—ಅದು ಹರಿಜನರಲ್ಲಿ ಮಾತ್ರವೇ ಅಲ್ಲ ಎಲ್ಲಾ ಜಾತಿಯಲ್ಲೂ ಇದೆ. ಹಿಂದುಳಿದ ಜನಾಂಗದಲ್ಲಿ ಎಡಗೈ ಬಲಗೈ ಎಂದರೆ ಹೆಚ್ಚಿನ ಅವಿದ್ಯಾವಂತರು; ತಿಳಿವಳಿಕೆ ಇಲ್ಲದವರು ಯಾರಿದ್ದಾರೆ ಅವರನ್ನು ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಮುಖಂಡರು ಆ ರೀತಿ ಹೇಳುತ್ತಾರೆಯೇ ಹೊರತು ಬಡತನದಲ್ಲಿರುವ ಆ ಜನರಲ್ಲಿ ಈ ತರಹ ಎಂದಿಗೂ ಭೇದ ಇಲ್ಲವೇ ಇಲ್ಲ. ಅದನ್ನು ಬೇರೆಯವರು ಎತ್ತಿ ಹೇಳುತ್ತಾ ಇದ್ದಾರೆ ವಿಪರೀತ ಮಾಡುತ್ತಾ ಇದ್ದಾರೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಆದ್ದರಿಂದ ಹಳ್ಳಿಗಾಡಿನಲ್ಲಿ ಹೋದರೆ ಈ ಎಡಗೈ ಬಲಗೈ ಎಂಬುದು ಇಲ್ಲವೇ ಇಲ್ಲ. ಹಾಗೆ ನೋಡುವುದಾದರೆ ಎಲ್ಲಾ ಜಾತಿಯಲ್ಲೂ ಒಂದಲ್ಲ ಒಂದು ಭೇದ ಇದ್ದೇ ಇರುತ್ತದೆ. ಆದ್ದರಿಂದ ಇದು ಕೇವಲ ಹರಿಜನರಲ್ಲಿದೆ ಎಂದು ಹೇಳುವುದು ಬೇಡ ಎಂಬುದನ್ನು ಸದಸ್ಯರೆಲ್ಲರೂ ಮನಗಾಣುತ್ತಾರೆ ಎಂಬ ನಂಬಿಕೆ ನನಗಿದೆ. ಎಡಗೈ ಬಲಗೈ ಎಂಬುದು ಹಾಸ್ಟೆಲ್ ನಲ್ಲಿ ಅಡಿಗೆ ಮಾಡುವ ವಿಷಯವಾಗಿ ಬರುತ್ತಾ ಇದೆ. ಇದನ್ನು ಬಹಳ ಧೈರ್ಯದಿಂದ ಸುಧಾರಣೆ ಮಾಡಬೇಕಾಗಿ ಬರುತ್ತದೆ. ಈ ದಿನ ಜನರಲ್ ಹಾಸ್ಟೆಲುಗಳನ್ನು ಹೆಚ್ಚಾಗಿ ತೆರೆದು ಅಸ್ಪೃಶ್ಯತೆಯ ನಿವಾರಣೆ ಮಾಡಬೇಕೆನ್ನುವುದೇ ಸರ್ಕಾರದ ಸಂಪೂರ್ಣ ಉದ್ದೇಶವಾಗಿರುವುದರಿಂದ ಅತಿ ಜಾಗ್ರತೆಯಾಗಿ ಈ ಒಂದು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಅಷ್ಟು ಮಾತ್ರ ಈ ದಿವಸ ಹೇಳಬಯಸುತ್ತೇನೆ. ಮೈಂಗಳೂರು, ಶಿವಮೊಗ್ಗ ಮತ್ತು ಕಾರವಾರದಲ್ಲಿ ಹಾಸ್ಟೆಲುಗಳಲ್ಲಿ ಅಲ್ಲೂ ಕೂಡ ಹಾಸ್ಟೆಲುಗಳನ್ನು ಏರ್ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನೂ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ ಇನ್ನೊಂದು ಸಮಯ ಉಪಯೋಗಿಸಿಕೊಂಡು ಸೂಕ್ತವಾದ ಉತ್ತರವನ್ನು ಅಂಕಿ ಅಂಶಗಳ ಮುಖೇನ ಎಷ್ಟು ಹಾಸ್ಟೆಲುಗಳು ಇವೆ, ಸೋಷಿಯಲ್ ವೆಲ್‌ಫೇರ್ ಸೆಂಟರ್ಸ್ ಯಾವ ಯಾವ ಜನಾಂಗಕ್ಕೆ ಎಷ್ಟೆಷ್ಟು ಇವೆ, ಎಲ್ಲೆಲ್ಲಿವೆ ಯಾವ ರೀತಿ ಸಾರ್ವಜನಿಕ ಮುಖಂಡರಾಗಲಿ ಬೇರೆಯವರಾಗಲಿ ಅವರವರಿಗೆ ಇಷ್ಟು ಬಂದ ಹಾಗೆ ಶಿಫಾರಸು ಮಾಡಿಕೊಂಡು ಹಣ ತೆಗೆದುಕೊಂಡಿದ್ದಾರೆ—ಎಲ್ಲರೂ ಆ ರೀತಿ ಮಾಡಿದ್ದಾರೆ ಎಂದು ಹೇಳುವುದಿಲ್ಲ ಆ ರೀತಿ ಹೇಳುವುದನ್ನು ಸರ್ಕಾರ ಒಪ್ಪುವುದಿಲ್ಲ—ಅಂತೂ ಸಾರ್ವಜನಿಕರ ಉಪಯೋಗಕ್ಕಾಗಿ ಕೊಟ್ಟ ಹಣ ಯಾವ ರೀತಿ ದುರುಪಯೋಗವಾಗಿದೆ ಯಾವ ರೀತಿ ದುರುಪಯೋಗವಾದಂತೆ ನೋಡಿಕೊಳ್ಳಬೇಕು

ಅದಕ್ಕೆ ಚಿಕಿತ್ಸೆ ಕಂಡುಹಿಡಿಯಬೇಕೆಂಬುದನ್ನು ಹೇಳುತ್ತೇನೆ. ಸರ್ಕಾರದವರು ಕೂಟ್ಟ ಹಣ ಸಹಾಯವೇನಿದೆ ಅದು ಖರ್ಚಾಗಬೇಕಾದರೆ ಸ್ವಲ್ಪ ನಿಧಾನವಾಗುತ್ತದೆ. ಇಲ್ಲಿ ಪ್ರತಿಯೊಂದೂ ಅ ಇಂದ ಹಿಡಿದು ಕ್ಷ ವರೆಗೂ ಯಾವ ಸುಧಾರಣೆಯಾಗಿದೆ ಎಂಬ ಅಂಶ ಇದೆ, ಆ ಪ್ರಕಾರ ಸುಧಾರಣೆ ಯಾಗುತ್ತಾ ಇದೆ ಕೂಟ್ಟ ಹಣ ನದುಪಯೋಗವಾಗುತ್ತಾ ಇದೆ. ಜಿಲ್ಲಾವಾರು ಹಣ ಕೊಟ್ಟಿದ್ದೇವೆ. ವಿಶೇಷವಾಗಿ ಮುಖಂಡರು ತಮ್ಮ ಭಾಗದಲ್ಲಿ ನಿಜವಾಗಿಯೂ ಯಾರು ಹಿಂದೆ ಬಿದ್ದಿದ್ದಾರೆ ಎಂಬುದನ್ನು ನೋಡಿ ಯಾರು ದೀನರು, ದಿಕ್ಕಿಲ್ಲದವರು ಇದ್ದಾರೆ ಎಂಬುದನ್ನು ವಿಚಾರಮಾಡಿ ನೋಡಿ ಅವರಿಗೆ ನಲ್ಲ ಬೇಕಾದ ಹಣವನ್ನು ಹಂಚಬೇಕು ಆ ರೀತಿ ಮಾಡದಿದ್ದರೆ ಸರಿಯಾಗುವುದಿಲ್ಲ. ಅದ್ದರಿಂದ ಬಹಳ ದೈನ್ಯವಾಗಿ ಹೇಳುತ್ತಾ ಇದ್ದೇನೆ ಇದು ನಿಜವಾಗಿಯೂ ನಡೆಯುತ್ತಿರುವ ವಿಚಾರ, ನಿಜನುಡಿಯುವ ಮನು ಲೋಕ ವಿರೋಧಿ ಎಂದು ಹೇಳುತ್ತಾರೆ ಅದು ಸತ್ಯವಾದ ವಿಷಯ, ಯಾವ ಭಯ ಭೀತಿ ಇಲ್ಲದೇ ಏನು ಬೇಕಾದರೂ ನಮ್ಮ ಇರಾಜೆಯ ಮೂಲಕ ನಿರ್ಧಂಡನೆಯಿಂದ ಮಾಡಿಸಿಕೊಳ್ಳಬೇಕಾದ ಕೆಲಸ ಗಳನ್ನು ಮಾಡಿಸಿಕೊಳ್ಳಲು ಯಾವ ಕಾಲದಲ್ಲಿ ಬೇಕಾದರೂ ಬರಬಹುದು ಅವನ್ನು ಕಾರ್ಯಗತ ಮಾಡಿಕೊಡಲು ನಾನು ಸದಾ ಸಿದ್ಧವಾಗಿದ್ದೇನೆ ಎಂದು ಹೇಳಿ ಶ್ರೀಮಾನ್ ನರ್ವೇಶ್ ಅವರು ತಂದಿರತಕ್ಕ ನಿರ್ಣಯ ಎಷ್ಟರವರೆಗೆ ಕಾರ್ಯಗತ ಮಾಡಬಹುದೋ ಅಷ್ಟರವರೆಗೆ ಕಾರ್ಯಗತ ಮಾಡುತ್ತೇವೆ ಎಂಬ ಭರವಸೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† **Sri M. V. RAMA RAO.**—I will merely say a few sentences with respect to the central point of the resolution which is under discussion. The pith and substance of the resolution before the House urges that the Government should make provision to give effect to what is said to be the Supreme Court's verdict in regard to the reservation of posts to be filled by promotion in the public services. All that I would wish to say to respect of that point is that when the Supreme Court dealt with an appeal from an order made by the High Court of Madras upon a Writ Petition filed by some officer in the Railways challenging the action taken by the Railway authorities, the Supreme Court found that upon a proper interpretation of Article 16 (4) read with arclicle 335, it could not be said that it was not within the authority of the State to make a reasonable provision within the meaning of Article 16 (4)—read, as I said, with Artile 335—for enabling the Scheduled Castes, Scheduled Tribes and other Backward Classes, to secure adequate representation in the public services. Actually what they have said is that is permissible for the State to make such reservations keeping in mind the requirements of Article 335. Therefore it connot be suggested that the Supreme Court have required the Union or State Governments to make provision for such reservation as a constitutional duty cast. The Union Government have been considering whether in view of the opinion expressed by the Supreme Court in the matter, steps should be taken and if so, what steps should be taken to ensure that such reservation should be made consistently with the requirements of Article 335. Actually, the Supreme Court dealt with the question of filling posts by promotion by selecting a person otherwise suitable for filling that post. Therefore the question of reservation of certain percentage of posts to be filled by ipromotion, rrespective of other considerations, would not be in public interest.

Sri G. V. GOWDA.—Does the Minister justify that it is not in public interest?

Sri K. H. RANGANATH.—It is only promotion to Selection Posts, not all posts

Sri M. V. RAMA RAO.—I am not importing any of my arguments into it. I am merely making a ireference to what the Supreme Court itself said. The Supreme Court observed:

"Under the construction by which the word 'posts' includes selection posts, the use of the word, 'posts' is not superflous but serves a very important purpose. It shows that reservation can be made not only in regard to appointments which are initial appointments but also in regard to selection posts which may fall to be filled by employees after their employment. Therfore, we are disposed to take the view that the power of reservation which is conferred on the State under Art. 16 (4) can be exercised by the State in a proper case not only by providing for reservation of appointments but also by providnig for reservation of selection posts. This construction, in our opinion, would serve to give effect to the intention of the constitution-makers to make adequate safeguard for the advancement of backward classes and to secure for their adequate representation in the services. Our conclusion therefore, is that the High Court was in error in holding that the impugned circulars do not fall within Art. 16 (4).

It is true that in providing for the reservation of appointments or posts under Art. 16 (4), the State has to take into consideration the claims of the members of the backward classes, consistently with the maintenance of the efficiency of administration. It must not be forgotten that the efficiency of administration is of such paramount importance that it would be unwise and impromissible to make any reservation at the cost of efficiency of administration. That undoubtedly is the effect of Art. 335. Reservation of appointments or posts may theoretically and conceivably mean some impairment of efficiency; but the risk involved in sacrificing efficiency of administration must always be borne in mind when any State sets about making a provision for reservation of appointment or posts. It is also true that the reservation which can be made under Art. 16 (4) is intended merely to give adequate representation to backward communities. It cannot be used for creating monopolies or for unduly or illegitimately disturbing the legitimate interests of other employees. In exercising the powers under Art. 16 (4), the problem of adequate representation of the backward class of citizens must be fairly and objectively considered and an attempt must always be made to strike a reasonable balance between the claims of backward classes and claims of other employees as well as the important consideration of the efficiency of administration; but in the present case, as we have already seen, the challenge to the validity of the impugned circulars is based on the assumption that the said circulars are outside Art. 16 (4) because the posts referred to in the said Article are posts outside the cadre or services and in any case, do not include selection post."

This is what the Supreme Court have said, and the main point is that it is permissible for the State Government or the Union Government consistently with the requirements of Art. 335 and every other

consideration which would be relevant to the question of recruitment to public services and promotion of those who are already in the public services, to make provision for providing, firstly selection post and secondly reserving the requisite proportion out of those selection posts for backward classes and scheduled castes and scheduled tribes, the other things being equal. This question, subsequent to the decision of the Supreme Court, is engaging the current attention of the Union Government and the Union Government have not taken a decision yet and the matter has been under consideration at other levels where State Governments have to consider these problems, which are of common interest to more than one State; and as the matter is engaging the attention of Government and the question of feasibility of making this reservation would impair efficiency in the public services has to be examined thoroughly before any decision is taken, I would suggest, that since the resolution has been debated and has covered a very wide range, the mover may not press, but may withdraw it.

Sri G. V. GOWDA.—Government should assure, Sir. No time limit is given and no assurance is given so it is indefinite.

Mr. DEPUTY SPEAKER.—Who is the mover in this case?

Sri G. V. GOWDA.—I am arguing against the mover to withdraw the resolution.

11-30 A.M.

ಶ್ರೀ ಕೆ. ಪಟ್. ರಂಗನಾಥ್.—ಈ ಸೋಪಿಯರ್ ವೆಲ್ಫೇರ್ ಆಫೀಸಿನಲ್ಲಿ ನೌಕರರಾಗಿರತಕ್ಕವರ ಅಪಾಯಿಂಟ್‌ಮೆಂಟಿನ ಬಗ್ಗೆ ಅದು ಸರಿಯಾಗಿಲ್ಲ. ತಪ್ಪಾಗಿದೆ ಎನ್ನತಕ್ಕ ವಿಚಾರದಲ್ಲಿ ಈಗ ಮೈಸೂರು ಹೈಕೋರ್ಟಿನ ಮುಂದೆ ಒಂದು ರಿಟ್ ಕೇಸು ಬಿದ್ದು ಅದು ಪೆಂಡಿಗ್‌ನಲ್ಲಿದೆ. ಹಾಗೆ ಅಲ್ಲಿ ಒಂದು ಕೇಸು ಪೆಂಡಿಂಗ್‌ನಲ್ಲಿರುವಾಗ, ಸರ್ಕಾರದವರು ಇಷ್ಟು ಆತುರಾತುರವಾಗಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಲು ಕಾರಣವೇನಿತ್ತು?

ಶ್ರಿಮತಿ ಯಶೋಧರ ದಾಸಪ್ಪ.—ಈಗ ಅವರ ಅಪಾಯಿಂಟ್‌ಮೆಂಟ್ ವಿಚಾರದಲ್ಲಿ ಅದು ಕ್ರಮವಾಗಿಲ್ಲ ಎಂದು ಹೇಳಿ ಅಕೌಂಟೆಂಟ್ ಜನರಲ್ಲರು ಆ ಬಗ್ಗೆ ಖರ್ಚು ಮಾಡಲು ಹಣವನ್ನು ಕೊಡುತ್ತಿಲ್ಲ. ಇತ್ತರಾಗಿ ಪಿ. ಎಸ್. ಸಿ. ಅವರೂ ಕೂಡ ಇದನ್ನು ಒಪ್ಪುತ್ತಿಲ್ಲ. ಹೀಗಾಗಿ ಅವರು ನಂಬಳವಿಲ್ಲದೆ ಬಹಳ ತೊಂದರೆ ಪಡುತ್ತಿದ್ದರು. ಆದುದರಿಂದ ನಾವು ರಾ ಇಲಾಖೆಯವರಿಂದ ಈ ವಿಚಾರವನ್ನು ಪರಿಶೀಲನೆ ಮಾಡಿಸಿ ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

Sri G. DUGGAPPA (Holalkere).—Sir, the Hon'ble Minister while replying did not make any sassurance as to whether the Government would take any decision. He imply said that it is under consideration of the Government. Of course it has been under the active consideration of the Government, but I take this opportunity to bring to the notice of the Government, that Government, if I say, should not only recognised the merit of the candidates but also the qualifications and other considerations of some very efficient young officials belonging to scheduled caste, who are working in some Department. In fact, they have been denied the opportunity of discharging their duties for which they were sent abroad. There are certain glaring instances where Government have failed. Therefore, I request the Government to take note of these things, and when things are to be given equal preference, I do not say

(SRI G. DUGGAPPA)

that the efficiency should be impaired. If there are candidates who are duly qualified or better qualified in the field in a particular Department, they should be recognised and given due share. I hope the Government will take into consideration these things and do justice, and also take a decision early about this resolution.

ಶ್ರೀಮತಿ ಯಶೋಧರ ದಾಸಪ್ಪ.—ನಾನಾಗಲೇ ಹೇಳಿದ್ದೇನೆ. ಈ 17 ಜನ ಅವರ ತಪ್ಪಿಗಾಗಿ ಅವರು ಅನುಭವಿಸುತ್ತಿಲ್ಲ. ಅವರನ್ನು ತೆಗೆದುಕೊಂಡ ಕ್ರಮ ಸರಿಯಾಗಿಲ್ಲದೆ ಇದ್ದು, ಅವರು ಸರಿಯಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದೆ ಅವರಿಗೆ ಸಂಬಳವಿಲ್ಲದೆ ತೊಂದರೆಯಾಗಿತ್ತು. ಇವರಿಗೆ ವ್ಯವಸ್ಥಿತ ರೀತಿಯಲ್ಲ; ಅವರ ಯೋಗ್ಯತಾನುಸಾರ ಕೆಲಸಕಾರ್ಯಗಳನ್ನು ಕೊಡುವುದು ಸರ್ಕಾರದ ಗಮನದಲ್ಲಿ ಇವತ್ತೂ ಇದೆ. ಅದರಲ್ಲಿ ಅನುಮಾನವಿಲ್ಲ. ಒಂದೇ ಜಾಗೆಯಲ್ಲಿ ಇಷ್ಟು ಜನ ಇರತಕ್ಕದ್ದು ನ್ಯಾಯವಲ್ಲ. ಈಗ ಶೇಕಡ 15+3=18% ಪ್ರಕಾರ ರೆಕ್ರಾಟಾರಕ್ಕೆ ತಕ್ಕಂತೆ ಕೆಲಸಮಾಡಬೇಕು.

†SRI J. P. SARWESH.—Sir, I thank all the Hon'ble Members who have supported this resolution. All of them have agreed that it is a very important resolution and that scheduled caste should get due representation.

Sir, the Supreme Court gave two decisions in Scheduled castes. The first decision said that reservations in the promotions should be made to scheduled castes, scheduled tribes and backward classes and the second decision said that the places which are not filled should not be kept vacant indefinitely. This Second resolution, the Government is very strictly following. And it is not applying the first resolution. My request is, it is a national problem and it is not only the scheduled castes who are interested in this, the whole nation should be interested in it, and particularly those who are highly qualified. It is their duty. If they are suffering, it is due to the culture and religion and education, we have and it is their duty ; and realising this thing, I request the Government that they should treat this issue as a national issue and bestow the needed attention on this subject and take early decision. As the Government has assured that they have not yet taken a decision, I seek the leave of the House to withdraw my resolution.

The resolution was, by leave of the House, withdrawn.

NON-OFFICIAL RESOLUTION

***Re*: Replacement of the present Single Party Government by a Popular Non-party Government.**

ಶ್ರೀ ವೀರಭದ್ರಪ್ಪ ಈರಪ್ಪ (ಎಲ್ಬುರ್ಗ).—ಮಹಾಸ್ವಾಮಿ, ಇಂದಿನ ತುರ್ತುಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದಲ್ಲಿ ಈಗಿರುವ ಏಕ ಪಕ್ಷೀಯ ಸರಕಾರವನ್ನು ಬದಲಾಯಿಸಿ ಪಕ್ಷಾತೀತವಾದ ಜನತಾ ರಾಜ್ಯವನ್ನು ಸ್ಥಾಪಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ.